ಸಂಪುಟ 01 | ಸಂಚಿಕೆ 169 ಭಾನುವಾರ 23 ಆಗಸ್ಟ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1)ಅಂತರರಾಷ್ಟ್ರೀಯ ಗುಲಾಮರ ವ್ಯಾಪಾರ ಮತ್ತು ಅದರ ನಿರ್ಮೂಲನೆ ಸ್ಮರಣಾ ದಿನ**
(International Day for the Remembrance of the Slave Trade and its Abolition) ? ಗುಲಾಮರ ವ್ಯಾಪಾರದ ದುರಂತವನ್ನು ನೆನಪಿಸಿಕೊಂಡು ಮಾನವ ಸ್ವಾತಂತ್ರ್ಯ ಮತ್ತು ಸಮಾನತೆಯ ಮಹತ್ವವನ್ನು ಸಾರುವ ದಿನ.

**2)ಯುರೋಪಿಯನ್ ಸ್ಟಾಲಿನಿಸಂ ಮತ್ತು ನಾಜಿಸಂ ಬಲಿಪಶುಗಳ ಸ್ಮರಣಾ ದಿನ**
(European Day of Remembrance for Victims of Stalinism and Nazism) ? ನಿರಂಕುಶ ಆಡಳಿತಗಳಿಂದ ಬಲಿಯಾದವರನ್ನು ಸ್ಮರಿಸುವ ದಿನ.

**3) ರಾಷ್ಟ್ರೀಯ ಸ್ಪಾಂಜ್ ಕೇಕ್ ದಿನ**
(National Sponge Cake Day) ? ಸ್ಪಾಂಜ್ ಕೇಕ್‌ಗೆ ಸಮರ್ಪಿತ ಆಚರಣಾ ದಿನ.

**4)ರಾಷ್ಟ್ರೀಯ ಬಾಹ್ಯಾಕಾಶ ದಿನ (ಭಾರತ)**
ರಾಷ್ಟ್ರೀಯ ಬಾಹ್ಯಾಕಾಶ ದಿನವನ್ನು ಭಾರತದಲ್ಲಿ ಪ್ರತಿವರ್ಷ ಆಗಸ್ಟ್ 23ರಂದು ಆಚರಿಸಲಾಗುತ್ತದೆ. ಈ ದಿನವು ಭಾರತದ ಚಂದ್ರಯಾನ-3 ಮಿಷನ್‌ನ ಐತಿಹಾಸಿಕ ಸಾಧನೆಯನ್ನು ಸ್ಮರಿಸಲು ಆಚರಿಸಲಾಗುತ್ತದೆ. 2023ರ ಆಗಸ್ಟ್ 23ರಂದು, ಚಂದ್ರಯಾನ-3ರ ವಿಕ್ರಮ್

## ಸುಭಾಷಿತ

ಒಮ್ಮೆ ನೀವು ಯಾವುದಾದರೂ ಕೆಲಸ ಮಾಡಲು ಪ್ರಾರಂಭಿಸಿದ ಬಳಿಕ ಸೋಲಿನ ಬಗ್ಗೆ ಭಯ ಪಡಬೇಡಿ ಅಥವಾ ಹಿಂದಡಿ ಇಡಬೇಡಿ

-ಚಾಣಕ್ಯ

## ಸನ್ ರೈಸ್ ಕಾಲೇಜಿನ ಶನಿವಾರದ ವಿಶೇಷ ಉಪನ್ಯಾಸ ನೀಡಿದ ಡಾ. ಹಂಪಮ್ಮ

❑ ನೈಜ್ಯ ದೇಸೆ ನ್ಯೂಸ್

ಸಿಂಧನೂರು: ಸನ್ ರೈಸ್ ಡಿ-ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜು, ಸಿಂಧನೂರು ವತಿಯಿಂದ ಪ್ರತೀ ಶನಿವಾರದಂದು ಹಮ್ಮಿಕೊಳ್ಳಲಾಗುತ್ತಿರುವ ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಂಗವಾಗಿ ಆಗಸ್ಟ್ 22ರಂದು ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮಕ್ಕೆ ಸಿಂಧನೂರಿನ ಶ್ರೀ ಧನ್ವಂತರಿ ಆಯುರ್ವೇದಿಕ್ ಕ್ಲಿನಿಕ್‌ನ ಖ್ಯಾತ ಆಯುರ್ವೇದ ತಜ್ಞರಾದ ಡಾ. ಹಂಪಮ್ಮ ಮೇಡಂ ಅವರು ಮುಖ್ಯ ಅತಿಥಿಯಾಗಿ ಆಗಮಿಸಿ, ವಿದ್ಯಾರ್ಥಿಗಳಿಗೆ 'ದೇಹ ಶುದ್ಧೀಕರಣ' ಎಂಬ ಮಹತ್ವದ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.ಉಪನ್ಯಾಸದಲ್ಲಿ ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಸ್ವಚ್ಛತೆ, ಆರೋಗ್ಯಕರ ಜೀವನಶೈಲಿ, ಆಹಾರ ಪದ್ಧತಿ ಹಾಗೂ ದೈಹಿಕ-ಮಾನಸಿಕ ಆರೋಗ್ಯದ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿಯನ್ನು ನೀಡಿದರು.

ಆರೋಗ್ಯಕರ ಜೀವನಕ್ಕೆ ದೇಹದ ಆರೈಕೆ ಮತ್ತು ಉತ್ತಮ ದಿನಚರಿ ಎಷ್ಟು ಅಗತ್ಯ ಎಂಬುದನ್ನು ಸರಳವಾಗಿ ವಿವರಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಆರೋಗ್ಯದ ಕುರಿತು ಜಾಗೃತಿ ಮೂಡಿಸಿದರು.ಇದೇ ಸಂದರ್ಭದಲ್ಲಿ ನರ್ಸಿಂಗ್ ವೃತ್ತಿಯ ಮಹತ್ವ, ಸಮಾಜದಲ್ಲಿ ನರ್ಸ್‌ಗಳ ಪಾತ್ರ ಹಾಗೂ ಆರೋಗ್ಯ ಸೇವೆಯಲ್ಲಿ ನರ್ಸಿಂಗ್ ಕ್ಷೇತ್ರದ ಕೊಡುಗೆ ಕುರಿತು ಅವರು ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕವಾಗಿ ಮಾತನಾಡಿದರು. ನರ್ಸಿಂಗ್ ಕ್ಷೇತ್ರವನ್ನು ಕೇವಲ ಉದ್ಯೋಗದ ದೃಷ್ಟಿಯಿಂದ ನೋಡದೆ, ರೋಗಿಗಳು ಮತ್ತು ಸಮಾಜದ ಸೇವೆಯ ಮಹತ್ವದ ವೃತ್ತಿಯಾಗಿ ಪರಿಗಣಿಸಬೇಕು ಎಂದು ತಿಳಿಸಿದರು.ವಿದ್ಯಾರ್ಥಿಗಳು ತಮ್ಮ ಜ್ಞಾನ, ಕೌಶಲ್ಯ ಮತ್ತು ಆತ್ಮವಿಶ್ವಾಸವನ್ನು ನಿರಂತರವಾಗಿ




ವೃದ್ಧಿಸಿಕೊಳ್ಳಬೇಕು. ತರಗತಿಯಲ್ಲಿ ಕಲಿಯುವ ಪಠ್ಯಜ್ಞಾನದ ಜೊತೆಗೆ ಪ್ರಾಯೋಗಿಕ ಜ್ಞಾನ, ಮಾನವೀಯತೆ, ಸೇವಾ ಮನೋಭಾವ ಮತ್ತು ಉತ್ತಮ ಸಂವಹನ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಡಾ. ಹಂಪಮ್ಮ ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸವನ್ನು ಆಲಿಸಿದ ವಿದ್ಯಾರ್ಥಿಗಳು ವಿವಿಧ ವಿಷಯಗಳ ಕುರಿತು ಮಾಹಿತಿ ಪಡೆದುಕೊಂಡು, ತಮ್ಮ ವೃತ್ತಿಜೀವನಕ್ಕೆ ಅಗತ್ಯವಾದ ಆತ್ಮವಿಶ್ವಾಸ ಹಾಗೂ ಪ್ರೇರಣೆಯನ್ನು ಹೊಂದಿದರು. ಪ್ರತೀ ಶನಿವಾರ ಆಯೋಜಿಸಲಾಗುತ್ತಿರುವ ಇಂತಹ ವಿಶೇಷ ಉಪನ್ಯಾಸಗಳು ವಿದ್ಯಾರ್ಥಿಗಳಲ್ಲಿ ಪಠ್ಯಕ್ರಮದ ಹೊರತಾದ ಜ್ಞಾನವನ್ನು ಹೆಚ್ಚಿಸುವುದರ ಜೊತೆಗೆ ವಿವಿಧ ಕ್ಷೇತ್ರಗಳ ತಜ್ಞರ ಅನುಭವ ಮತ್ತು ಮಾರ್ಗದರ್ಶನವನ್ನು ಪಡೆಯಲು ಉತ್ತಮ ವೇದಿಕೆಯಾಗಿವೆ.ಈ ಸಂದರ್ಭದಲ್ಲಿ ಮಾತನಾಡಿದ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರಾದ ಲಾಜರ್ ಸಿರಿಲ್ ಅವರು, "ನಮ್ಮ ವಿದ್ಯಾರ್ಥಿಗಳಿಗೆ 'ದೇಹ ಶುದ್ಧೀಕರಣ'ದಂತಹ ಮಹತ್ವದ ಆರೋಗ್ಯ ವಿಷಯದ ಕುರಿತು ಅತ್ಯಂತ ಉಪಯುಕ್ತ ಹಾಗೂ ಜ್ಞಾನವರ್ಧಕ ಉಪನ್ಯಾಸ ನೀಡಿದ ಡಾ. ಹಂಪಮ್ಮ ಮೇಡಂ ಅವರಿಗೆ ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ., ಕಾರ್ಯದರ್ಶಿಗಳಾದ ಇರ್ಷಾದ್ ಕೆ., ಎಲ್ಲಾ ವಿಭಾಗಗಳ ಪ್ರಾಚಾರ್ಯರು ಹಾಗೂ ಉಪನ್ಯಾಸಕರ ಪರವಾಗಿ ಹಾಗೂ ಎಲ್ಲಾ ವಿಭಾಗದ ವಿದ್ಯಾರ್ಥಿಗಳ ಪರವಾಗಿ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತೇವೆ" ಎಂದು ಹೇಳಿದರು.

ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಸನ್ ರೈಸ್ ವಿದ್ಯಾ ಸಂಸ್ಥೆಯಲ್ಲಿ ಪ್ರತೀ ಶನಿವಾರ ವಿವಿಧ ಕ್ಷೇತ್ರಗಳ ತಜ್ಞರನ್ನು ಆಹ್ವಾನಿಸಿ ವಿಶೇಷ ಉಪನ್ಯಾಸಗಳನ್ನು ಆಯೋಜಿಸಲಾಗುತ್ತಿದೆ. ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಜ್ಞಾನವನ್ನು ವಿಸ್ತರಿಸುವುದರ ಜೊತೆಗೆ, ವೃತ್ತಿಪರ ಜೀವನಕ್ಕೆ ಅಗತ್ಯವಾದ ಆತ್ಮವಿಶ್ವಾಸ, ಸೇವಾ ಮನೋಭಾವ ಮತ್ತು ನಾಯಕತ್ವ ಗುಣಗಳನ್ನು ಬೆಳೆಸಲು ಸಹಕಾರಿಯಾಗುತ್ತಿವೆ. ಸನ್ ರೈಸ್ ಸಂಸ್ಥೆಯ ಈ ಶೈಕ್ಷಣಿಕ ಪ್ರಯತ್ನಕ್ಕೆ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಮೆಚ್ಚುಗೆ ವ್ಯಕ್ತಪಡಿಸಿದ್ದು, ಮುಂದಿನ ದಿನಗಳಲ್ಲಿಯೂ ಇಂತಹ ಇನ್ನಷ್ಟು ಜ್ಞಾನವರ್ಧಕ ಹಾಗೂ ಪ್ರೇರಣಾದಾಯಕ ಕಾರ್ಯಕ್ರಮಗಳನ್ನು ಆಯೋಜಿಸುವುದಾಗಿ ಸಂಸ್ಥೆಯ ವತಿಯಿಂದ ತಿಳಿಸಲಾಯಿತು.







## ರೇಷ್ಮೆ ಇಲಾಖೆ ಗೋದಾಮಿಗೆ ಬೆಂಕಿ ದಾಖಲೆ, ಪರಿಕರಗಳು ಬೆಂಕಿಗಾಹುತಿ




❑ ನೈಜ್ಯ ದೇಸೆ ನ್ಯೂಸ್

**ಲಿಂಗಸಗೂರು: ಪಟ್ಟಣದ ಹಳೆ ಕೋರ್ಟ್ ರಸ್ತೆಯಲ್ಲಿರುವ ರೇಷ್ಮೆ ಇಲಾಖೆಯ ಗೋದಾಮಿಗೆ ಶನಿವಾರ ಬೆಳಗ್ಗೆ ಆಕಸ್ಮಿಕವಾಗಿ ಬೆಂಕಿ ತಗುಲಿ, ಗೋದಾಮಿನಲ್ಲಿದ್ದ ಇಲಾಖೆಗೆ ಸಂಬಂಧಿಸಿದ ದಾಖಲೆಗಳು ಹಾಗೂ ರೈತ-ರಿಗೆ ವಿತರಿಸಬೇಕಾಗಿದ್ದ ವಿವಿಧ ಪರಿಕರಗಳು ಬೆಂಕಿಗಾಹುತಿಯಾಗಿರುವ ಘಟನೆ ನಡೆದಿದೆ.**

ಇಂದು ಕಚೇರಿಗೆ ರಜೆ ಇದ್ದು, ಸಿಬ್ಬಂದಿ ಯಾರೂ ಸ್ಥಳದಲ್ಲಿ ಇರಲಿಲ್ಲ. ಈ ಸಂದರ್ಭದಲ್ಲಿ ಗೋದಾಮಿನಿಂದ ಹೊಗೆ ಹಾಗೂ ಬೆಂಕಿ ಕಾಣಿಸಿಕೊಂಡಿರುವುದನ್ನು ಗಮನಿಸಿದ ಸ್ಥಳೀಯರು ಕೂಡಲೇ ಅಗ್ನಿಶಾಮಕ ಠಾಣೆಗೆ ದೂರವಾಣಿ ಮೂಲಕ ಮಾಹಿತಿ ನೀಡಿದ್ದಾರೆ.

ರೇಷ್ಮೆ ಇಲಾಖೆ ಗೋದಾಮಿಗೆ ಬೆಂಕಿ ದಾಖಲೆ, ಪರಿಕರಗಳು ಬೆಂಕಿಗಾವುತಿ ಯಾಗಿದ್ದು ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಹಾಗೂ ಸ್ಥಳೀಯರು ಬೆಂಕಿ ನಂದಿಸುವ ಕಾರ್ಯ ಕೈಗೊಂಡು ಹೆಚ್ಚಿನ ಪ್ರಮಾಣದಲ್ಲಿ ಬೆಂಕಿ ವ್ಯಾಪಿಸುವುದನ್ನು ತಡೆದಿದ್ದಾರೆ. ಘಟನೆಯಿಂದ ಗೋದಾಮಿನಲ್ಲಿದ್ದ ಹಲವು ದಾಖಲೆಗಳು, ಪರಿಕರಗಳು ಹಾಗೂ ಇತರೆ ಸಾಮಗ್ರಿಗಳು ಹಾನಿಗೊಳಗಾಗಿವೆ ಎಂದು ತಿಳಿದುಬಂದಿದೆ. ಬೆಂಕಿ ಅವಘಡಕ್ಕೆ ನಿಖರ ಕಾರಣವೇನು ಎಂಬುದು ಇನ್ನೂ ತಿಳಿದುಬಂದಿಲ್ಲ. ಸಂಬಂಧಪಟ್ಟ ಅಧಿಕಾ-ರಿಗಳ ಪರಿಶೀಲನೆಯ ಬಳಿಕವಷ್ಟೇ ನಿಖರ ಕಾರಣ ತಿಳಿದುಬರಬೇಕಿದೆ.

ರೇಷ್ಮೆ ಇಲಾಖೆಯ ಗೋದಾಮಿನಲ್ಲಿ ರೈತರಿಗೆ ವಿತ-ರಿಸಬೇಕಾಗಿದ್ದ ಪರಿಕರಗಳು ಬೆಂಕಿಗೆ ಆಹುತಿಯಾಗಿರುವುದರಿಂದ, ಅವುಗಳ ವಿತರಣೆಗೆ ತೊಂದರೆಯಾಗುವ ಸಾಧ್ಯತೆ ಇದೆ. ಘಟನೆಯ ಕುರಿತು ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಹಾನಿಯ ಪ್ರಮಾಣದ ಕುರಿತು ಮಾಹಿತಿ ಕಲೆಹಾಕಬೇಕಿದೆ. ಜೊತೆಗೆ ಗೋದಾಮಿನ ಭದ್ರತೆ ಹಾಗೂ ಅಗ್ನಿ ಸುರಕ್ಷತಾ ಕ್ರಮಗಳ ಬಗ್ಗೆಯೂ ಪರಿಶೀಲನೆ ನಡೆಸಬೇಕೆಂದು ರೈತರು ಒತ್ತಾಯಿಸಿದ್ದಾರೆ.



## 5ಇ ಪಾಠ ಯೋಜನೆ ಕಾರ್ಯಗಾರ ಉದ್ಘಾಟನೆ

❑ ನೈಜ್ಯ ದೇಸೆ ನ್ಯೂಸ್

**ತಾಳಿಕೋಟಿ: ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯ, ತಾಳಿಕೋಟಿಯಲ್ಲಿ IQAC ಅಡಿಯಲ್ಲಿ 5ಇ ಪಾಠ ಯೋಜನೆ ಕಾರ್ಯಗಾರ ಉದ್ಘಾಟನಾ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಆರ್.ಎಂ. ಬಂಟನೂರ ವಹಿಸಿದ್ದರು.**

ವಿಜಯಪುರದ ದ್ರೋಣ ಕ-ರಿಯರ್ ಅಕಾಡೆಮಿಯ, ಉಪನ್ಯಾಸಕರಾದ ಕುಮಾರಿ ಪ್ರಿಯಾಂಕಾ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಐಕ್ಯುಎಸಿ ಸಂಯೋಜಕರು ಹಾಗೂ ಪಾಠ ಯೋಜನೆ ಕಾರ್ಯಗಾರದ ಸಂಘಟಕರಾದ ಪ್ರೊ. ಯು.ಎನ್. ಮಂಗೊಂಡ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಅತಿಥಿಗಳಾದ ಪ್ರಿಯಾಂಕಾ ರವರು 5ಇ ಪಾಠ ಯೋಜನೆ ಕು-ರಿತು ವಿಶೇಷ ಉಪನ್ಯಾಸ ನೀಡಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ವಿಷಯ ಜ್ಞಾನ, ನಿರಂತರ ಅಭ್ಯಾಸ, ಸಮಯ ನಿರ್ವಹಣೆ, ತಾರ್ಕಿಕ ಚಿಂತನೆ ಮತ್ತು ಆತ್ಮವಿಶ್ವಾಸ ಅಗತ್ಯ ಎಂದು ತಿಳಿಸಿದರು.




ಅವರು 5ಇ ಹಂತಗಳನ್ನು ಪರಿಣಾಮಕಾ-ರಿಯಾಗಿ ಬಳಸಿಕೊಳ್ಳುವ ವಿಧಾನವನ್ನು ವಿವರಿಸಿದರು. ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸುವುದು, ಸ್ವಯಂ ಅನ್ವೇಷಣೆಗೆ ಅವಕಾಶ ನೀಡುವುದು, ಪರಿಕಲ್ಪನೆಗಳನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳುವುದು, ಕಲಿತ ಜ್ಞಾನವನ್ನು ಹೊಸ ಪ್ರಶ್ನೆಗಳಿಗೆ ಅನ್ವಯಿಸುವುದು ಹಾಗೂ ಮಾದರಿ ಪರೀಕ್ಷೆಗಳ ಮೂಲಕ ಮೌಲ್ಯಮಾಪನ ಮಾಡಿಕೊಳ್ಳುವುದು ಯಶಸ್ಸಿಗೆ ಸಹಾಯಕವಾಗುತ್ತದೆ ಎಂದು ಹೇಳಿದರು.ಜೊತೆಗೆ 5ಈ ಆಧಾ-ರಿತ ಪಾಠವನ್ನು ಪ್ರಸ್ತುತಿ ಪಡಿಸಿದರು.

ಅಧ್ಯಕ್ಷೀಯ ನುಡಿಗಳಲ್ಲಿ ಡಾ. ಆರ್.ಎಂ. ಬಂಟನೂರ ಅವರು, ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಸಾಂಪ್ರದಾಯಿಕ ಬೋಧನೆಯ ಜೊತೆಗೆ ನವೀನ ಮತ್ತು ಚಟುವಟಿಕೆ ಆಧಾರಿತ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವೆಂದು ತಿಳಿಸಿದರು.ಪ್ರೊ. ಯು.ಎನ್. ಮಂಗೊಂಡ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಕಾರ್ಯಕ್ರಮದ ಉದ್ದೇಶ ಹಾಗೂ ಮಹತ್ವವನ್ನು ವಿವರಿಸಿದರು. ಐಕ್ಯುಎಸಿ ಅಡಿಯಲ್ಲಿ ಇಂತಹ ಶೈಕ್ಷಣಿಕ ಹಾಗೂ ಗುಣವರ್ಧಕ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸುವ ಮೂಲಕ ಪ್ರಶಿಕ್ಷಣಾರ್ಥಿಗಳ ಶೈಕ್ಷಣಿಕ ಮತ್ತು ವೃತ್ತಿಪರ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶ ಹೊಂದಲಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಬಸಲಿಂಗಪ್ಪ ಅವರು ಸ್ವಾಗತ ಹಾಗೂ ಪರಿಚಯವನ್ನು ನೆರವೇರಿಸಿದರು.

ನವನಾಥ ಅವರಿಂದ ಪ್ರಾರ್ಥನಾ ಗೀತೆ ನಡೆಯಿತು. ನವನಾಥ ಆ.ಊ. ಅವರು ಪುಷ್ಪಾರ್ಪಣೆ ನೆರವೇ-ರಿಸಿದರು. ಕಾರ್ಯಕ್ರಮವನ್ನು ಕ-ರಿಯಣ್ಣ ಅವರು ನಿರೂಪಿಸಿದರು. ಕೊನೆಯಲ್ಲಿ ಸಂತೋಷ ಕುಮಾರ ಅವರು ವಂದನಾರ್ಪಣೆ ಸಲ್ಲಿಸಿದರು. ಮಹಾವಿದ್ಯಾಲಯದ ಉಪನ್ಯಾಸಕರು, ಪ್ರಶಿಕ್ಷಣಾರ್ಥಿಗಳು ಹಾಗೂ ಸಿಬ್ಬಂದಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. 5ಇ ಪಾಠ ಯೋಜನೆ ಸಂಯೋಜಿಸುವ ಕುರಿತು ನಡೆದ ಈ ಕಾರ್ಯಕ್ರಮವು ಪ್ರಶಿಕ್ಷಣಾರ್ಥಿಗಳಿಗೆ ಉಪಯುಕ್ತ ಹಾಗೂ ಮಾರ್ಗದರ್ಶಕವಾಗಿತ್ತು.

## ಸೊಲ್ಲಾಪುರ ಮತ್ತು ಅನಕಾಪಲ್ಲಿ ನಡುವೆ ಹೊಸ ವಾರದ ಎಕ್ಸ್‌ಪ್ರೆಸ್ ರೈಲು ಪ್ರಾರಂಭ- ಡಾ.ಬಾಬುರಾವ್

❑ ನೈಜ್ಯ ದೇಸೆ ನ್ಯೂಸ್



**ರಾಯಚೂರು: ಸೊಲ್ಲಾಪುರ-ಅನಕಾಪಲ್ಲಿ ಹೊಸ ವಾರದ ಎಕ್ಸ್‌ಪ್ರೆಸ್ ರೈಲು (ಸಂಖ್ಯೆ 11313) ಶುಕ್ರವಾರ ಬೆಳಿಗ್ಗೆ 9.20ಕ್ಕೆ ಸೊಲ್ಲಾಪುರದಿಂದ ಹೊರಟು ಶನಿವಾರ ಮಧ್ಯಾಹ್ನ 2.40ಕ್ಕೆ ಅನಕಾಪಲ್ಲಿಯನ್ನು ತಲುಪಲಿದೆ ಎಂದು ರೈಲ್ವೆ ಸಲಹಾ ಸಮಿತಿ ಮಾಜಿ ಸದಸ್ಯ ಡಾ.ಬಾಬುರಾವ್ ತಿಳಿಸಿದ್ದಾರೆ.**

ವಾಪಸ್ ಮಾರ್ಗದಲ್ಲಿ, ಅನಕಾಪಲ್ಲಿ-ಸೊಲ್ಲಾಪುರ ಎಕ್ಸ್‌ಪ್ರೆಸ್ (ಸಂಖ್ಯೆ 11314) ಶನಿವಾರ ಸಂಜೆ 5.35ಕ್ಕೆ ಅನಕಾಪಲ್ಲಿಯಿಂದ ಹೊರಟು ಮರುದಿನ ರಾತ್ರಿ 11.50ಕ್ಕೆ ಸೊಲ್ಲಾಪುರವನ್ನು ತಲುಪಲಿದೆ. ಈ ವಾರದ ವಿಶೇಷ ರೈಲು ಮಹಾರಾಷ್ಟ್ರದ ಸೊಲ್ಲಾಪುರ ಮತ್ತು ಆಂಧ್ರಪ್ರದೇಶದ ಅನಕಾಪಲ್ಲಿ ನಡುವೆ ನೇರ ಸಂಪರ್ಕವನ್ನು ಒದಗಿಸುತ್ತದೆ. ಇದು ದಕ್ಷಿಣ ಕರಾವಳಿ ರೈಲ್ವೆ (SCoR) ಪ್ರಕಟಣೆಯ ಪ್ರಕಾರ, ಕಲಬುರಗಿ, ವಾಡಿ, ರಾಯಚೂರು, ಗುಂತಕಲ್, ಅನಂತಪುರ, ಧರ್ಮವರಂ, ತಿರುಪತಿ, ನೆಲ್ಲೂರು, ಒಂಗೋಲು, ತೆನಾಲಿ, ವಿಜಯವಾಡ, ಏಲೂರು, ರಾಜಮಹೇಂದ್ರವರಂ, ಸಾಮರ್ಲಕೋಟ ಮತ್ತು ಅನ್ನವರಂ ಸೇ-ರಿದಂತೆ ಪ್ರಮುಖ ನಿಲ್ದಾಣಗಳ ಮೂಲಕ ಹಾದುಹೋಗುತ್ತದೆ ಎಂದುಹೇಳಿದ್ದಾರೆ. ಈ ರೈಲನ್ನು ಓಡಿಸುವಂತೆ ರೇಲ್ವೆ ಸಚಿವ ಅಶ್ವಿನ್ ವೈಷ್ಣವಿ ಹಾಗೂ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣನವರಿಗೆ ಮಾಡಿಕೊಂಡ ಮನವಿಗೆ ಸ್ಪಂದಿಸಿರುವುದು ಅಭಿನಂದನಾರ್ಹ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

## ಹೈದರಾಬಾದ್-ರಾಷ್ಟ್ರೀಯ ಸ್ಪೆಲ್ಲಿಂಗ್ ಬೀ ನಲ್ಲಿ ಗೆದ್ದು USA ಅಂತರರಾಷ್ಟ್ರೀಯ ವೇದಿಕೆ ತಲುಪಲಿ ಶ್ರೀನಿಧಿ ಸುಭಾಸ್ ಮತ್ತು ಸಯ್ಯದಾ ಫಾಬೈಕಾ ಗೆ ನೋಬಲ್ ಟೇಕ್ನೋ ಶಾಲೆಯ ಅಧ್ಯಕ್ಷರು- ಎಸ್ ಎ ಖಾದರ್ ಸುಭಾನೀ ಶುಭಹಾರೈಕೆ

❑ ನೈಜ್ಯ ದೇಸೆ ನ್ಯೂಸ್

**ಸಿಂಧನೂರು: ವಿಶ್ವಂ ಎಜುಟೆಕ್ ಸಂಸ್ಥೆಯ ವತಿಯಿಂದ ಕಳೆದ ಮಾರ್ಚ್ ತಿಂಗಳಲ್ಲಿ ಆಂಧ್ರಪ್ರದೇಶದ ಅನಂತಪುರದಲ್ಲಿ ಆಯೋಜಿಸಲಾಗಿದ್ದ VSIPL Spell-ing Bee ರಾಜ್ಯ ಮಟ್ಟದ ಸ್ಪರ್ಧೆನಲ್ಲಿ ಸಿಂಧನೂರಿನ ನೋಬಲ್ ಟೇಕ್ನೋ ಶಾಲೆ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆಯುವ ಮೂಲಕ ರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.**

ಶಾಲೆಯ ವಿದ್ಯಾರ್ಥಿನಿ ಶ್ರೀನಿಧಿ ಸುಭಾಸ್ ಶಿರಬಡಗಿ 4ನೇ ತರಗತಿ ಹಾಗೂ ವಿದ್ಯಾರ್ಥಿನಿ ಸಯ್ಯದಾ ಫಾಬೈಕಾ





6ನೇ ತರಗತಿ ಅವರು ರಾಜ್ಯಮಟ್ಟದ ಸ್ಪರ್ಧೆಯಲ್ಲಿ ತಮ್ಮ ಅದ್ಭುತ ಪದಜ್ಞಾನ ಮತ್ತು ಆತ್ಮವಿಶ್ವಾಸವನ್ನು ಪ್ರದರ್ಶಿಸಿ 1ನೇ ಸ್ಥಾನ ಪಡೆದು ರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ. ಈ ಇಬ್ಬರು ಪ್ರತಿಭಾವಂತ ವಿದ್ಯಾರ್ಥಿಗಳು ಭಾನುವಾರ, 23 ಆಗಸ್ಟ್ 2026ರಂದು ಹೈದರಾಬಾದ್‌ನಲ್ಲಿ ನಡೆಯಲಿರುವ VSIPL Spelling Bee National Level Competitionನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಲಿದ್ದಾರೆ.

ರಾಷ್ಟ್ರೀಯ ಮಟ್ಟದಲ್ಲಿಯೂ ಪ್ರಥಮ ಸ್ಥಾನ ಗಳಿಸಿದಲ್ಲಿ, ಇವರಿಗೆ ಅಮೆರಿಕದ ಗಖಂಯಲ್ಲಿ ನಡೆಯಲಿರುವ International Level Spelling Bee Competitionನಲ್ಲಿ ಭಾಗವಹಿಸುವ ಅಮೂಲ್ಯ ಅವಕಾಶ ದೊರೆಯಲಿದೆ. ಈ ಮಹತ್ವದ ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವ ನಮ್ಮ ವಿದ್ಯಾರ್ಥಿಗಳಾದ ಶ್ರೀನಿಧಿ ಸುಭಾಸ್ ಶಿರಬಡಗಿ ಮತ್ತು ಸಯ್ಯದಾ ಫಾಬೈಕಾ ಅವರಿಗೆ ನೋಬಲ್ ಟೇಕ್ನೋ ಶಾಲೆಯ ಅಧ್ಯಕ್ಷರು ಎಸ್ ಎ ಖಾದರ್ ಸುಭಾನೀ, ಆಡಳಿತ ಅಧಿಕಾರಿ ಸಯ್ಯದ್ ತನವೀರ್, ಮುಖ್ಯಗುರುಗಳು ಆಗಿರುವ ಜಯಶ್ರೀ, ಮುಬೀನಾ, ಅಕಾಡೆಮಿಕ್ ಹೆಡ್ ಸೊಬಿಯ ಮೆಹವಿಶ್ ಹಾಗೂ ಶಿಕ್ಷಕ ವೃಂದ ಹಾಗೂ ಎಲ್ಲಾ ವಿದ್ಯಾರ್ಥಿಗಳ ಪರವಾಗಿ ಹೃತ್ಪೂರ್ವಕ ಶುಭಾಶಯಗಳನ್ನು ಸಲ್ಲಿಸಿ "ನಿಮ್ಮ ಪರಿಶ್ರಮಕ್ಕೆ ಯಶಸ್ಸು ಸಿಗಲಿ, ರಾಷ್ಟ್ರೀಯ ಮಟ್ಟದಲ್ಲಿ ವಿಜಯ ಸಾಧಿಸಿ ಗಖಂ ಅಂತರರಾಷ್ಟ್ರೀಯ ವೇದಿಕೆಯಲ್ಲಿ ಭಾರತದ ಹೆಸರನ್ನು ಬೆಳಗಿಸುವಂತಾಗಲಿ." ಎಂದು ಶುಭಹಾರೈಸಿದರು...

## ಸಾಹಿತ್ಯ ಸಿಂಚನ

### ಯುವಶಕ್ತಿಯ ಜ್ವಾಲೆ

ಯುವಶಕ್ತಿಯ ಜ್ವಾಲೆ ಹೊತ್ತಿದೆ ಮನದಲ್ಲಿ,
ಹೊಸ ಕನಸುಗಳ ಬೆಳಕು ಮೂಡಿದೆ ಕಣ್ಣಲ್ಲಿ?
ಸವಾಲುಗಳು ಬಂದರೂ ಹೆದರದ ಧೈರ್ಯ,
ಮುನ್ನಡೆಯ ಹಾದಿಯೇ ನಮ್ಮ ನಿಜವಾದ ಕಾರ್ಯ?

ಕಷ್ಟದ ಕಲ್ಲನ್ನು ಮೆಟ್ಟಿಲಾಗಿಸಿಕೊಂಡು,
ಸೋಲಿನ ಪಾಠವನ್ನು ಶಕ್ತಿಯಾಗಿಸಿಕೊಂಡು,
ದೇಶದ ಭವಿಷ್ಯ ನಮ್ಮ ಕೈಯಲ್ಲಿದೆ,
ಯುವಜನರ ಕನಸಲ್ಲಿ ಹೊಸ ಭಾರತವಿದೆ?

ಜ್ಞಾನವೇ ಆಯುಧ, ಶ್ರಮವೇ ಶಕ್ತಿ,
ಏಕತೆಯಲ್ಲಿದೆ ನಮ್ಮ ನಿಜವಾದ ಭಕ್ತಿ?
ಜ್ವಾಲೆಯಂತೆ ಹೊತ್ತ ಯುವ ಮನಸ್ಸು,
ಬದಲಿಸಲಿ ಜಗವನ್ನೆಲ್ಲ ತನ್ನ ಪ್ರಯತ್ನದ ಮೂಲಕ?

ಎದ್ದೇಳಿ ಯುವಕರೇ, ಸಮಯ ನಮ್ಮದು,
ಸಾಧನೆಯ ಶಿಖರವೇ ಗುರಿ ನಮ್ಮದು?
ಹೊತ್ತಿಸೋಣ ಆಶೆಯ ದೀಪದ ಜ್ವಾಲೆ,
ಯುವಶಕ್ತಿಯೇ ದೇಶದ ಅಮರ ಕಿರಣಮಾಲೆ!

ಅಡೆತಡೆ ಬಂದರೂ ನಿಲ್ಲದ ಹೆಜ್ಜೆ,
ಗುರಿಯತ್ತ ಸಾಗಲಿ ನಮ್ಮ ಪ್ರತಿಯೊಂದು ಹೆಜ್ಜೆ?
ಬೆವರಿನ ಹನಿಯೇ ಯಶಸ್ಸಿನ ಮುತ್ತು,
ಪ್ರಯತ್ನದ ಹಾದಿಯೇ ಜೀವನದ ಸತ್ಯ?

ಯುವ ಹೃದಯದಲ್ಲಿ ಸಾವಿರ ಕನಸು,
ಸಾಧಿಸುವ ಛಲವೇ ನಮ್ಮ ಉಸಿರು?
ಅಜ್ಞಾನ ಕತ್ತಲನ್ನು ದೂರಮಾಡುವ ಬೆಳಕು,
ಶಿಕ್ಷಣದಿಂದ ಬೆಳೆಯಲಿ ದೇಶದ ಏಳಿಗೆಗೆ ಬಲಕು?

ಸತ್ಯದ ದಾರಿಯಲ್ಲಿ ಸಾಗೋಣ ನಾವು,
ಸೇವೆಯ ಮನಸ್ಸಿನಿಂದ ಬದುಕೋಣ ನಾವು?
ಬಡತನ, ಭೇದಭಾವ ದೂರವಾಗಲಿ,
ಸಮಾನತೆಯ ಸೂರ್ಯನು ಉದಯವಾಗಲಿ?

ಕೈ ಕೈ ಹಿಡಿದು ಮುನ್ನಡೆಯೋಣ,
ಹೊಸ ಸಮಾಜವನ್ನು ಕಟ್ಟೋಣ?
ಪ್ರೀತಿ, ಶಾಂತಿ, ಸಹಕಾರದೊಂದಿಗೆ,
ಭಾರತವನ್ನು ಬೆಳೆಸೋಣ ಹೆಮ್ಮೆಯೊಂದಿಗೆ?

ಯುವಶಕ್ತಿಯೇ ದೇಶದ ನವಚೈತನ್ಯ,
ಯುವಮನಸ್ಸೇ ಪ್ರಗತಿಯ ಪ್ರೇರಣಾ ಧನ್ಯ?
ನಮ್ಮೊಳಗಿನ ಜ್ವಾಲೆ ಎಂದಿಗೂ ಆರದಿರಲಿ,
ಭಾರತದ ಕೀರ್ತಿ ಜಗದಾಳೆ ಹರಡಲಿ!


ಎದ್ದೇಳು ಯುವಕರೇ, ಎದ್ದೇಳು ಯುವತಿಯರೇ,
ನಮ್ಮ ಶಕ್ತಿಯೇ ನಾಳೆಯ ಬೆಳಕಾಗಲಿ!
ಕನಸುಗಳನ್ನು ಕಾರ್ಯವಾಗಿ ರೂಪಿಸೋಣ,
ಯುವಶಕ್ತಿಯ ಜ್ವಾಲೆಯಿಂದ ಭಾರತವನ್ನು
ಬೆಳಗಿಸೋಣ

# ಗುರು ಶ್ರೇಷ್ಠ ಶ್ರೀ ಜೆ. ಆಯ್. ಮನಿಯಾರ್ ಶಿಷ್ಯನ ಮನದಾಳದ ಗುರುನಮನ

❏ ನೈಜ್ಯ ದೆಸೆ ನ್ಯೂಸ್

**ಹುಣಸಗಿ: ಕರ್ನಾಟಕ ರಾಜ್ಯ ಶಿಕ್ಷಕರ ಪ್ರತಿಭಾ ಪರಿಷತ್ತು (ರಿ.), ಮೈಸೂರು ಇದರ ಸಾಹಿತಿ ಶಿಕ್ಷಕರ ಸಮಿತಿಯು ಆಯೋಜಿಸಿರುವ ಸ್ವರಚಿತ ಕಿರುಲೇಖನ ರಚನಾ ಸ್ಪರ್ಧೆಗಾಗಿ, ಸಾಹಿತಿ ಶಿಕ್ಷಕ ಶ್ರೀ ವಿದ್ಯಾಕುಮಾರ್ ಮ. ಬಡಿಗೇರ್ ಅವರು ತಮ್ಮ ಬಾಲ್ಯದ ಗುರು ಹಾಗೂ ನಿವೃತ್ತ ಶಿಕ್ಷಕರಾದ ಶ್ರೀ ಜೆ. ಆಯ್. ಮನಿಯಾರ್ ಅವರ ಕುರಿತು ಹೃದಯಸ್ಪರ್ಶಿ ಕಿರುಲೇಖನ ರಚಿಸಿದ್ದಾರೆ.**

ಮುಧೋಳ ತಾಲೂಕಿನ ರನ್ನ ಮಾದರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುತ್ತಿದ್ದ ದಿನಗಳಿಂದಲೂ ಶ್ರೀ ಜೆ. ಆಯ್. ಮನಿಯಾರ್ ಅವರ ವ್ಯಕ್ತಿತ್ವ ತಮ್ಮ ಮೇಲೆ ಆಳವಾದ ಪ್ರಭಾವ ಬೀರಿದೆ ಎಂದು ಶ್ರೀ ವಿದ್ಯಾಕುಮಾರ್ ಬಡಿಗೇರ್ ಅವರು ತಮ್ಮ ಬರಹದಲ್ಲಿ ಸ್ಮರಿಸಿದ್ದಾರೆ. ಸರಳತೆ, ಶಿಸ್ತು, ಪ್ರಾಮಾಣಿಕತೆ, ಮಾನವೀಯತೆ ಹಾಗೂ ವಿದ್ಯಾರ್ಥಿಗಳ ಮೇಲಿನ ಅಪಾರ ಪ್ರೀತಿ ಅವರ ವ್ಯಕ್ತಿತ್ವದ ಪ್ರಮುಖ ಗುಣಗಳಾಗಿದ್ದವು ಎಂದು ಅವರು ಹೇಳಿದ್ದಾರೆ. ಬಿಳಿ ಪೈಜಾಮ, ನೆಹರು ಅಂಗಿ ಹಾಗೂ ಗಾಂಧಿ ಟೋಪಿ ಧರಿಸಿ ತರಗತಿಗೆ ಬರುತ್ತಿದ್ದ ಮನಿಯಾರ್ ಅವರ ಸರಳ ರೂಪ ಇಂದಿಗೂ ಕಣ್ಣಮುಂದೆ ನಿಲ್ಲುತ್ತದೆ.



ವಿದ್ಯಾರ್ಥಿಗಳನ್ನು ಸ್ವಂತ ಮಕ್ಕಳಂತೆ ಕಾಣುತ್ತಿದ್ದ ಅವರು, ತಪ್ಪು ಮಾಡಿದಾಗ ಪ್ರೀತಿಯಿಂದ ತಿದ್ದಿ, ಸನ್ಮಾರ್ಗದಲ್ಲಿ ನಡೆಯುವಂತೆ ಮಾರ್ಗದರ್ಶನ ನೀಡುತ್ತಿದ್ದರು. ಅವರ ಬೋಧನೆಯ ಪ್ರಭಾವ ಇಂದಿಗೂ ತಮ್ಮ ಹಾಗೂ ತಮ್ಮ ಸಹಪಾಠಿಗಳ ಜೀವನದಲ್ಲಿ ಅಚ್ಚಳಿಯದೆ ಉಳಿದಿದೆ ಎಂದು ಅವರುತಿಳಿಸಿದ್ದಾರೆ."ಯಾವುದೇ ಆಸೆ–ಆಮಿಷಗಳಿಗೆ ಒಳಗಾಗಬೇಡಿ, ದುಷ್ಟ ಚಟಗಳಿಗೆ ಬಲಿಯಾಗಬೇಡಿ, ಬೇರೆಯವರಿಗೆ ಹೊರೆಯಾಗದೆ ಸ್ವಾವಲಂಬಿಗಳಾಗಿ ಬದುಕಿ, ದೇವರನ್ನು ಮರೆಯಬೇಡಿ, ಪ್ರಾಮಾಣಿಕತೆ, ಶಿಸ್ತು ಮತ್ತು ಮಾನವೀಯತೆಯನ್ನು ಜೀವನದ ಮೌಲ್ಯಗಳನ್ನಾಗಿ ಮಾಡಿಕೊಳ್ಳಿ" ಎಂಬ ಗುರುಗಳ ಜೀವನಪಾಠಗಳು ಇಂದಿಗೂ ದಾರಿದೀಪವಾಗಿವೆ ಎಂದು ಅವರು ಸ್ಮರಿಸಿದ್ದಾರೆ.

ಶ್ರೀ ಜೆ. ಆಯ್. ಮನಿಯಾರ್ ಅವರು ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ವಿಜೇತರಾಗಿದ್ದು, ಪ್ರಸ್ತುತ 84ನೇ ವಯಸ್ಸಿನಲ್ಲಿಯೂ ಮುಧೋಳದಲ್ಲಿ ಆರೋಗ್ಯದಿಂದ ವಾಸಿಸುತ್ತಿದ್ದಾರೆ. ವಿದ್ಯಾರ್ಥಿಗಳು ತುಂಟಾಟ ಮಾಡಿದಾಗ ಅವರು ತಮಾಷೆಯಾಗಿ ಬೈದು ಬುದ್ಧಿ ಹೇಳುತ್ತಿದ್ದ ಸಂದರ್ಭಗಳನ್ನು ಸ್ಮರಿಸಿರುವ ಲೇಖಕರು, "ಖಾರಬೇಳಿ" ಹಾಗೂ ಬಡಿತದಿಂದ ತಪ್ಪಿಸಿಕೊಂಡಾಗ ಹೇಳುತ್ತಿದ್ದ "ಕುಡಸಾಲೆ ತಪ್ಪಿಸಿಕೊಂಡ" ಎಂಬ ಅವರ ಹಾಸ್ಯಮಿಶ್ರಿತ ಮಾತುಗಳು ಇಂದಿಗೂ ಶಿಷ್ಯರಲ್ಲಿ ನಗು ಮತ್ತು ಸಿಹಿ ನೆನಪು ಮೂಡಿಸುತ್ತವೆ ಎಂದು ಹೇಳಿದ್ದಾರೆ. "ಅವರ ಮಾತುಗಳಲ್ಲಿ ಪ್ರೀತಿ, ಬೋಧನೆಯಲ್ಲಿ ಜ್ಞಾನ ಮತ್ತು ಬೈಗುಳದಲ್ಲಿಯೂ ವಾತ್ಸಲ್ಯ ಇತ್ತು. ಅವರಂತಹ ಶಿಕ್ಷಕರು ಶಿಷ್ಯರ ಬದುಕನ್ನು ರೂಪಿಸುವ ನಿಜವಾದ ಶಿಲ್ಪಿಗಳು" ಎಂದು ಶ್ರೀ ವಿದ್ಯಾಕುಮಾರ್ ಬಡಿಗೇರ್ ಅವರು ತಮ್ಮ ಗುರುಗಳ ಸೇವೆಯನ್ನು ಕೊಂಡಾಡಿದ್ದಾರೆ.

ಇದೇ ಸಂದರ್ಭದಲ್ಲಿ 'ಗುರುವೆಂಬ ಶಿಲ್ಪಿ' ಎಂಬ ಶೀರ್ಷಿಕೆಯಡಿ ಗುರುನಮನ ಕವಿತೆಯನ್ನೂ ರಚಿಸಿರುವ ಅವರು, ತಮ್ಮ ಗುರುಗಳನ್ನು ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರಂತಹ ಆದರ್ಶ ಶಿಕ್ಷಕರಿಗೆ ಹೋಲಿಸಿದ್ದಾರೆ. "ಇಂದು ನಿಮ್ಮ ಈ ವಿದ್ಯಾರ್ಥಿಯೂ ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದಾನೆ. ನನ್ನ ಮೇಲಿನ ನಿಮ್ಮ ಆಶೀರ್ವಾದ ಸದಾ ಇರಲಿ" ಎಂದು ಭಾವುಕರಾಗಿ ಗುರುಗಳಿಗೆ ಕೃತಜ್ಞತೆ ಸಲ್ಲಿಸಿರುವ ಶ್ರೀ ವಿದ್ಯಾಕುಮಾರ್ ಮ. ಬಡಿಗೇರ್ ಅವರು, "ಗುರುಗಳೇ, ನಿಮ್ಮ ಪಾದಗಳಿಗೆ ಅನಂತ ಶಿರಸಾಷ್ಟಾಂಗ ನಮನಗಳು" ಎಂದು ತಮ್ಮ ಬರಹವನ್ನು ಸಮರ್ಪಿಸಿದ್ದಾರೆ.

ಶ್ರೀ ವಿದ್ಯಾಕುಮಾರ್ ಮ. ಬಡಿಗೇರ್ ಅವರು ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕಿನ ಹೆಬ್ಬಾಳ (ಕೆ) ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸಾಹಿತಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

# ಜೆಡಿಎಸ್ ತಾಲ್ಲೂಕು ಹಿಂದುಳಿದ ವರ್ಗದ ಅಧ್ಯಕ್ಷ ಬಸವರಾಜ್ ತೋಟದಮನೆಗೆ ಅದ್ದೂರಿ ಸನ್ಮಾನ

❏ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ, ಆ.22: ಜೆಡಿಎಸ್ ದೇವದುರ್ಗ ತಾಲ್ಲೂಕು ಹಿಂದುಳಿದ ವರ್ಗದ ಅಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡಿರುವ ಬಸವರಾಜ್ ತೋಟದಮನೆ ಅವರನ್ನು ಚಿಂಚೋಡಿ ಗ್ರಾಮದ ಗ್ರಾಮಸ್ಥರು, ಮುಖಂಡರು ಹಾಗೂ ಜೆಡಿಎಸ್ ಕಾರ್ಯಕರ್ತರ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಿ ಅಭಿನಂದಿಸಲಾಯಿತು.**

ಬಸವರಾಜ್ ತೋಟದಮನೆ ಅವರು ತಾಲ್ಲೂಕು ಹಿಂದುಳಿದ ವರ್ಗದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರಲ್ಲಿ ಸಂತಸ ವ್ಯಕ್ತವಾಗಿದ್ದು, ಊರಿನ ಪ್ರಮುಖರು ಹಾಗೂ ಸಾರ್ವಜನಿಕರು ಸೇರಿ ಸನ್ಮಾನ ಕಾರ್ಯಕ್ರಮ ಆಯೋಜಿಸಿದ್ದರು. ಈ ಸಂದರ್ಭದಲ್ಲಿ ಬಸವರಾಜ್ ತೋಟದಮನೆ ಅವರಿಗೆ ಶಾಲು ಹೊದಿಸಿ, ಹೂಮಾಲೆ ಹಾಕಿ ಗೌರವ ಸಲ್ಲಿಸಿ, ನೂತನ ಜವಾಬ್ದಾರಿಗೆ ಶುಭ ಹಾರೈಸಲಾಯಿತು. ಈ ವೇಳೆ ಮಾತನಾಡಿದ ಜಗದೀಶ್ ನಾಯಕ,



"ನಮ್ಮ ಊರಿನ ವ್ಯಕ್ತಿಯೊಬ್ಬರು ಜೆಡಿಎಸ್ ತಾಲ್ಲೂಕು ಹಿಂದುಳಿದ ವರ್ಗದ ಅಧ್ಯಕ್ಷರಾಗಿ ಜವಾಬ್ದಾರಿ ಪಡೆದಿರುವುದು ಹೆಮ್ಮೆಯ ಸಂಗತಿ. ಮುಂದಿನ ದಿನಗಳಲ್ಲಿ ಹಿಂದುಳಿದ ವರ್ಗದ ಜನರ ಸಮಸ್ಯೆಗಳಿಗೆ ಧ್ವನಿಯಾಗಿ, ಅವರ ಅಭಿವೃದ್ಧಿಗೆ ಶ್ರಮಿಸಲಿ" ಎಂದು ಆಶಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಬಸವರಾಜ್ ತೋಟದಮನೆ, ತಮ್ಮ ಮೇಲೆ ವಿಶ್ವಾಸವಿಟ್ಟು ಪಕ್ಷದಲ್ಲಿ ಜವಾಬ್ದಾರಿ ನೀಡಿದ ಪಕ್ಷದ ವರಿಷ್ಠರು, ಮುಖಂಡರು ಹಾಗೂ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಿದರು. "ನನ್ನನ್ನು ಬೆಂಬಲಿಸಿ ಸನ್ಮಾನಿಸಿದ ಊರಿನ ಜನರ ಪ್ರೀತಿ ಹಾಗೂ ವಿಶ್ವಾಸವನ್ನು ಎಂದಿಗೂ ಮರೆಯುವುದಿಲ್ಲ. ತಾಲ್ಲೂಕಿನ ಹಿಂದುಳಿದ ವರ್ಗದ ಜನರ ಸಮಸ್ಯೆಗಳನ್ನು ಅರಿತು, ಅವರ ಪರವಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಲು ಸದಾ ಸಿದ್ಧನಿದ್ದೇನೆ" ಎಂದು ಹೇಳಿದರು. ಹಿಂದುಳಿದ ವರ್ಗದ ಜನ–ರಿಗೆ ಸರ್ಕಾರದಿಂದ ದೊರೆಯಬೇಕಾದ ಸೌಲಭ್ಯಗಳು, ಶಿಕ್ಷಣ, ಉದ್ಯೋಗ ಹಾಗೂ ವಿವಿಧ ಅಭಿವೃದ್ಧಿ ಯೋಜನೆಗಳ ಕು–ರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವುದಾಗಿ ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಹುಸೇನಪ್ಪ ಗುತ್ತಿಗೆದಾರ, ಜೆಡಿಎಸ್ ಎಸ್‌ಸಿ ಮೋರ್ಚಾ ತಾಲ್ಲೂಕು ಅಧ್ಯಕ್ಷ ಗೋವಿಂದರಾಜ ತಿಂಪೂರು, ಜೆಡಿಎಸ್ ತಾಲ್ಲೂಕು ಕಾರ್ಯದರ್ಶಿ ಮುತ್ಯಪ್ಪ ಶಿಕ್ಷಕರು, ಮಲ್ಲಪ್ಪ ಬಳಗಂಡಿ, ಬಸಪ್ಪ ಸಣ್ಣಗೌಡ್ರು, ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಜಗದೀಶ್ ನಾಯಕ, ಭೀಮಣ್ಣ ಸಾಗರ, ಚಿಂಚೋಡಿ ದುರುಗಪ್ಪ ಆದೋನಿ, ರಾಮಯ್ಯ ಪೊಲೀಸ್ ಪಾಟೀಲ್, ಕಂಪೂರು ಮೌನೇಶ್, ದುರುಗಪ್ಪ ಕಂಪೂರು, ಅಮರೇಶ್ ಅಂಗಡಿ, ದುರುಗಪ್ಪ ಮುಂದಲಮನಿ, ಮೌನೇಶ್ ಕೊಂಬಿನ್, ಬಸವರಾಜ ಐಹೊಳೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ರೈತರಿಗೆ ಸಮರ್ಪಕವಾಗಿ 90 ದಿನಗಳ ಕಾಲ ನೀರು ಹರಿಸಿಕೊಂಡಾಗ ಉಪ ಕಾಲುವೆಗಳ ರೈತರಿಗೆ ನೀರಿನ ಅನುಕೂಲ : ಶಾಸಕ ಜೆ.ಎನ್.ಗಣೇಶ

❏ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : 2026–27ರ ಪ್ರಸಕ್ತ ಜಲವರ್ಷದಲ್ಲಿ ತುಂಗಭದ್ರಾ ಯೋಜನೆಯ ಕೆಳಮಟ್ಟದ ಕಾಲುವೆ (TBP LLC) ಕೋಟಾದಡಿ ತಕ್ಷಣವೇ ನೀರು ಬಿಡುಗಡೆ ಮಾಡುವಂತೆ ಹಾಗೂ ಬರೀ ಹತ್ತು ದಿನ ನೀರೊಯ್ಯುವದಲ್ಲಾ 90 ದಿನಗಳ ಕಾಲ ಆಂಧ್ರದವರು ನೀರೊಯ್ಯಬೇಕು.**

ಅಂದಾಗ ಮಾತ್ರ ಕರ್ನಾಟಕದ ಎಲ್‌ಎಲ್‌ಸಿ ಕಾಲುವೆ ಭಾಗದ ಡಿಸ್ಟಿಬ್ಯೂಟ–ರ್, ತೂಬುಗಳಿಗೆ ಸಮರ್ಪಕವಾಗಿ ರೈತ–ರಿಗೆ ನೀರೊದಿಗಿಸಲು ಸಾಧ್ಯ ಎಂದು ಶಾಸಕ ಜೆ.ಎನ್.ಗಣೇಶ್ ಹೇಳಿದರು. ಅವರು ಶನಿವಾರ ಪಟ್ಟಣದ ಶಾಸಕರ ಕಚೇ–ರಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, ಇತ್ತೀಚೆಗೆ ಬೆಂಗಳೂರಿನ ವಿಧಾನಸಭಾ ಅಧಿವೇಶನದಲ್ಲಿ ತುಂಗಭದ್ರ ಜಲಾಶಯದ ಬಲದಂಡೆಯ ಎಲ್‌ಎಲ್‌ಸಿ ಕಾಲುವೆಗೆ ಆಂಧ್ರ ಮತ್ತು ಕರ್ನಾಟಕ ಕೋಟಾದಡಿ ನೀರು ಹರಿಸಿ, ರೈತರ ಬೆಳೆಗಳಿಗೆ ಅನುವು ಮಾಡಿಕೊಡುವಂತೆ ಧ್ವನಿ ಎತ್ತುವ ಮೂಲಕ ಮನವಿ ಮಾಡಲಾಗಿ–ತ್ತು. ಅದರಂತೆ ಆಂಧ್ರದವರು ಆ.22ರಿಂದ 31ವರೆಗೆ 10ದಿನ 600 ಕ್ಯೂಸೆಕ್ ನೀರು ತೆಗೆದುಕೊಳ್ಳುವ ನಿರ್ಧಾರ ಮಾಡಿರುವುದು ಖುಷಿ ವಿಚಾರವಾದರೂ, 10 ದಿನದ ಬದಲು 90 ದಿನವರೆಗೆ ಆಂಧ್ರದವರು ಎರಡು ಕೋಟಾದಡಿ ನೀರು ಹರಿಸಿಕೊಳ್ಳಬೇಕಾಗಿದೆ. ಇದರಿಂದ ಮಾತ್ರ ನಮ್ಮ ಭಾಗದ ರೈತರಿಗೆ ಸಂಪೂರ್ಣವಾಗಿ ಬೆಳೆಗಳಿಗೆ ನೀರು ಹರಿಸಿಕೊಳ್ಳಲು ಸಾಧ್ಯ. ಈಗಾಗಲೇ ಈ ಭಾಗದ ರೈತರು ಬೆಳೆ ಬೆಳೆಯುವುದಕ್ಕೆ ಆಗದೇ, ಸಂಕಷ್ಟಕ್ಕೀಡಾಗಿದ್ದಾರೆ.

ರೈತರು ಹಾಕಿದಂತಹ ಸಸಿ ಮಡಿಗಳು ಬಹುತೇಕವಾಗಿ ಅವಧಿ ಮುಗಿಸಿ, ಭತ್ತದ ನಾಟಿಗೆ ಬಾರದಂತಾಗಿವೆ. ಜಲಾಶಯದಲ್ಲಿ ನೀರಿದ್ದರೂ, ಆಂಧ್ರದವರು ಈ ಬಾರೀ ತಮ್ಮ ಕೋಟಾದಡಿ ನೀರು ತೆಗೆದುಕೊಳ್ಳದ ಹಿನ್ನಲೆ ಕರ್ನಾಟಕದ ಕೋಟಾದಡಿ ಬಿಟ್ಟಂತಹ ನೀರು, ಕಾಲುವೆ ಮೂಲಕ ಉಪ ಕಾಲುವೆಗಳಿಗೆ ಏರುತ್ತಿಲ್ಲ. ಇದರಿಂದ ರೈತರು ಬೆಳೆ ಇಲ್ಲದೇ ಕಂಗಾಲಾಗಿದ್ದಾರೆ. ಆದ್ದರಿಂದ ಎರಡು ರಾಜ್ಯದ ಕೋಟಾದಡಿ ನೀರು ಹರಿಸಿಕೊಂಡಾಗ ಮಾತ್ರ




ಕೆಳ ಮಟ್ಟದ ಉಪ ಕಾಲುವೆಗಳ ರೈತರು ಜಮೀನುಗಳಿಗೆ ನೀರು ಹರಿಯಲು ಸಾಧ್ಯ. ಈ ನಿಟ್ಟಿನಲ್ಲಿ ಆಂಧ್ರದವರು ಸತತ 90 ದಿನಗಳ ಕಾಲ ಮಂಡಳಿಯ ಸ್ಲೂಯಿಸ್‌ಗಳಿಗೆ (Sluic-es) 90 ಕ್ಯೂಸೆಕ್ಸ್ ಹಾಗೂ ಆಂಧ್ರಪ್ರದೇಶ ವ್ಯಾಪ್ತಿಯ ಟಿ.ಬಿ.ಪಿ. ಎಲ್.ಎಲ್.ಸಿ. ಪ್ರದೇಶಕ್ಕೆ 580 ಕ್ಯೂಸೆಕ್ಸ್ ಸೇರಿದಂತೆ ಒಟ್ಟು ನೀರನ್ನು ಹರಿಸಲು ಅಗತ್ಯ ವ್ಯವಸ್ಥೆ ಕಲ್ಪಿಸಬೇಕು ನೀರೊಯ್ಯುವ ನಿರ್ಧಾರಕ್ಕೆ ಬರಬೇಕು ಎಂದರು.

## ರಸ್ತೆ ದುರಸ್ತಿಗೆ ಗ್ರಾಮಸ್ಥರ ಆಗ್ರಹ

❏ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ತಾಲೂಕಿನ ಕಡೇಕೊಪ್ಪ ಗ್ರಾಮದಲ್ಲಿ ರಸ್ತೆ ಹಾಗೂ ಚರಂಡಿ ಸಮಸ್ಯೆ ತೀವ್ರವಾಗಿದ್ದು, ರಸ್ತೆಯೋ, ಚರಂಡಿಯೋ ಎನ್ನುವಂತ ಪರಿಸ್ಥಿತಿ ನಿರ್ಮಾಣವಾಗಿದೆ. ನಿತ್ಯ ಗ್ರಾಮಸ್ಥರು ಸಂಚರಿಸುವ ಈ ರಸ್ತೆಯಲ್ಲಿ ಕೊಳಚೆ ನೀರು ನಿಂತು ಕೆಸರುಮಯವಾಗಿದೆ.**



ಚರಂಡಿ ನೀರು ಸರಾಗವಾಗಿ ಹ–ರಿಯದೆ ರಸ್ತೆಯಲ್ಲೇ ನಿಂತಿರುವುದ–ರಿಂದ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗಿದೆ. ಇದರಿಂದ ಗ್ರಾಮಸ್ಥರಲ್ಲಿ ಸಾಂಕ್ರಾಮಿಕ ರೋಗಗಳ ಆತಂಕವೂ ಎದುರಾಗಿದೆ ಎಂದು ವಾರ್ಡ್‌ನ ನಿವಾಸಿಗಳು ದೂರಿದ್ದಾರೆ. ಸಂಬಂಧಪಟ್ಟ ಅಭಿವೃದ್ಧಿ ಹಾಗೂ ಆಡಳಿತ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಕೂಡಲೇ ರಸ್ತೆ ದುರಸ್ತಿ ಹಾಗೂ ಚರಂಡಿ ವ್ಯವಸ್ಥೆ ಸುಧಾರಿಸಲು ಕ್ರಮ ಕೈಗೊಳ್ಳಬೇಕು. ಗ್ರಾಮಸ್ಥರ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

## 5 ಕೋಟಿ ವೆಚ್ಚದಲ್ಲಿ ಮಹಿಳಾ ಕಾಲೇಜು ಕಟ್ಟಡಕ್ಕೆ ಅಡಿಗಲ್ಲು

❏ ನೈಜ್ಯ ದೆಸೆ ನ್ಯೂಸ್

**ಕೊಪ್ಪಳ: ನಗರದ ಹಜರತ್ ಮರ್ದಾನ್ ಗೈಬ್ ದರ್ಗಾ ಆವರಣದಲ್ಲಿ ವಕ್ಫ್ ಆಸ್ತಿಗಳ ಸಂರಕ್ಷಣೆ ಹಾಗೂ ಅಭಿವೃದ್ಧಿ–ಜೀರ್ಣೋದ್ಧಾರ ಯೋಜನೆಯಡಿ ಮುಸ್ಲಿಂ ಸಮಾಜದ ಹೆಣ್ಣುಮಕ್ಕಳಿಗಾಗಿ ?5 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಮಹಿಳಾ ಕಾಲೇಜು ಕಟ್ಟಡದ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ಅವರು ಅಡಿಗಲ್ಲು ನೆರವೇರಿಸಿದರು.**



ಹೆಣ್ಣುಮಕ್ಕಳಿಗೆ ಉನ್ನತ ಶಿಕ್ಷಣದ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಕಾಲೇಜು ಕಟ್ಟಡ ನಿರ್ಮಾಣವಾಗುತ್ತಿರುವುದು ಶೈಕ್ಷಣಿಕ ಪ್ರಗತಿಗೆ ಸಹಕಾರಿಯಾಗಲಿದೆ ಎಂದು ಮುಖಂಡರು ತಿಳಿಸಿದರು. ಈ ಸಂದರ್ಭದಲ್ಲಿ ಸಂಸದ ಕೆ. ರಾಜಶೇಖರ ಹಿಟ್ನಾಳ್, ಶಾಸಕ ಕೆ. ರಾಘವೇಂದ್ರ ಹಿಟ್ನಾಳ್, ಕೆ.ಎಂ. ಸಯ್ಯದ್, ಅಮ್ಜದ್ ಪಟೇಲ್, ಕಾಟನ್ ಪಾಷಾ, ಮಾನವಿ ಪಾಷಾ ಸೇ–ರಿದಂತೆ ಮುಸ್ಲಿಂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಭಾರತ್ ಜೋಡೋ ಯುವ ಸಂಘಗಳ ವೆಚ್ಚದ ಹೊರೆ ಜಿಬಿಎ ಹೆಗಲಿಗೆ

❏ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಯುವಜನರಲ್ಲಿ ಕ್ರೀಡೆ, ಸಂಸ್ಕೃತಿ, ವೈಜ್ಞಾನಿಕ ಮನೋಭಾವ ಹಾಗೂ ಸಾಮುದಾಯಿಕ ಸಾಮಾಜಿಕ ಸಾಮರಸ್ಯವನ್ನು ಉತ್ತೇಜಿಸುವ ಉದ್ದೇಶದಿಂದ ರಾಜ್ಯಾದ್ಯಂತ 10 ಸಾವಿರ ಭಾರತ್ ಜೋಡೋ ಯುವ ಸಂಘಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ.**

ಈ ಯೋಜನೆಯಡಿ ನಗರದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಭಾರತ್ ಜೋಡೋ ಯುವ ಸಂಘಗಳಿಗೆ ತಗಲುವ ವೆಚ್ಚವನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರವೇ ಭರಿಸಬೇಕಿದೆ. ಯೋಜನೆಯಡಿ ಪ್ರತಿಯೊಂದು ಸಂಘಕ್ಕೆ ವಾರ್ಷಿಕ ತಲಾ 10 ಲಕ್ಷ ರೂಪಾಯಿ ಅನುದಾನ ನೀಡಲಾಗುತ್ತಿದ್ದು, ಒಟ್ಟು 1,000 ಕೋಟಿ ರೂಪಾಯಿ ವೆಚ್ಚವಾಗಲಿದೆ. ಆಡಳಿತ ಮತ್ತು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಯುನಿಟ್ ವೆಚ್ಚ ಸೇರಿದಂತೆ ಯೋಜನೆಯ ಒಟ್ಟು ವಾರ್ಷಿಕ ವೆಚ್ಚ 1,010 ಕೋಟಿ ರೂಪಾಯಿಯಾಗಲಿದೆ. ಸರ್ಕಾರದ ಮಾರ್ಗಸೂಚಿಯಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಂದು ಸಂಘ, ಪಟ್ಟಣ ಪಂಚಾಯಿತಿಯಲ್ಲಿ ಸರಾಸರಿ 4 ಸಾವಿರ ಜನಸಂಖ್ಯೆಗೆ ಒಂದು ಸಂಘ, ಪುರಸಭೆಯಲ್ಲಿ 6 ಸಾವಿರ ಜನಸಂಖ್ಯೆಗೆ ಒಂದು ಸಂಘ ಹಾಗೂ ನಗರಸಭೆಯಲ್ಲಿ 8 ಸಾವಿರ ಜನಸಂಖ್ಯೆಗೆ ಒಂದು ಸಂಘ ಸ್ಥಾಪಿಸಲಾಗುತ್ತದೆ.

ಅದೇ ರೀತಿ ಮಹಾನಗರ ಪಾಲಿಕೆ




ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ಸರಾಸರಿ 10 ಸಾವಿರ ಜನಸಂಖ್ಯೆಗೆ ಒಂದು ಭಾರತ್ ಜೋಡೋ ಯುವ ಸಂಘ ಸ್ಥಾಪಿಸಲು ಸರ್ಕಾರ ಸೂಚಿಸಿದೆ.

ವಿಶೇಷವೆಂದರೆ, ಜಿಬಿಎ ವ್ಯಾಪ್ತಿಯಲ್ಲಿ ಈ ಯೋಜನೆಯ ಅನುಷ್ಠಾನಕ್ಕೆ ಬೇಕಾಗುವ ವೆಚ್ಚವನ್ನು ಜಿಬಿಎ ಹಾಗೂ ಅದರ ವ್ಯಾಪ್ತಿಯ ಐದು ನಗರ ಪಾಲಿಕೆಗಳು ತಮ್ಮ ಸ್ವಂತ ಆಯವ್ಯಯದಿಂದಲೇ ಭರಿಸಬೇಕು ಎಂದು ಸರ್ಕಾರದ ಮಾರ್ಗಸೂಚಿಯಲ್ಲಿ ಸೂಚಿಸಲಾಗಿದೆ.

ಇದರಿಂದ ನಗರದ ಐದು ನಗರ ಪಾಲಿಕೆಗಳ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಬೀಳುವ ಸಾಧ್ಯತೆ ಇದೆ. ಜಿಬಿಎ ವ್ಯಾಪ್ತಿಯಲ್ಲಿನ ಸಂಘಗಳ ಸಂಖ್ಯೆ, ಅವುಗಳಿಗೆ ಬೇಕಾಗುವ ಅನುದಾನ ಹಾಗೂ ಐದು ನಗರ ಪಾಲಿಕೆಗಳು ಭರಿಸಬೇಕಾದ ವೆಚ್ಚದ ಪ್ರಮಾಣವನ್ನು ಜನಸಂಖ್ಯೆಯ ಆಧಾರದ ಮೇಲೆ ನಿಗದಿಪಡಿಸಲಾಗುತ್ತದೆ. ಯೋಜನೆಯಡಿ ಒಟ್ಟು 10 ಸಾವಿರ ಸಂಘಗಳಿಗೆ ನೀಡಲಾಗುವ 1,000 ಕೋಟಿ ರೂಪಾಯಿ ಅನುದಾನದಲ್ಲೇ ಪ್ರತಿ ಸಂಘದಲ್ಲಿನ ಒಬ್ಬ ತರಬೇತುದಾರರಿಗೆ ವಾರ್ಷಿಕ 24 ಸಾವಿರ ರೂಪಾಯಿ ಗೌರವಧನ ನೀಡಲು 24 ಕೋಟಿ ರೂಪಾಯಿ ಮೀಸಲಿಡಲಾಗಿದೆ.

ಸಚಿವ ಸಂಪುಟದ ಉಪಸಮಿತಿ ಶಿಫಾರಸು ಭಾರತ್ ಜೋಡೋ ಯುವ ಸಂಘಗಳ ಸ್ಥಾಪನೆ ಕುರಿತು ಸಚಿವ ಸಂಪುಟದಲ್ಲಿ ಚರ್ಚೆ ನಡೆದ ಬಳಿಕ ಸೂಕ್ತ ಶಿಫಾರಸುಗಳಿಗಾಗಿ ಸಚಿವ ಸಂಪುಟ ಉಪಸಮಿತಿಯನ್ನು ರಚಿಸಲಾಗಿತ್ತು. ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿದ್ದ ಉಪಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಯೋಜನೆಯ ಮಾರ್ಗಸೂಚಿ ಸಿದ್ಧಪಡಿಸಲಾಗಿದ್ದು, ಕೆಲ ಮಾರ್ಪಾಡುಗಳೊಂದಿಗೆ ಸಚಿವ ಸಂಪುಟ ಅನುಮೋದನೆ ನೀಡಿದೆ. ಯೋಜನೆಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ನಗರಾಭಿವೃದ್ಧಿ, ಕಂದಾಯ ಹಾಗೂ ಶಿಕ್ಷಣ ಇಲಾಖೆಗಳ ಸಹಯೋಗದೊಂದಿಗೆ ಸಂಘಗಳ ಚಟುವಟಿ–ಕೆಗಳನ್ನು ನಡೆಸಲು ಸರ್ಕಾರ ಸೂಚಿಸಿದೆ.

ಪ್ರತಿ ವರ್ಷ 1,010 ಕೋಟಿ ರೂಪಾಯಿ ವೆಚ್ಚದಲ್ಲಿ ಯೋಜನೆ ಅನುಷ್ಠಾನಗೊಳ್ಳಲಿದ್ದು, ಮಾರ್ಗಸೂಚಿಗಳಲ್ಲಿ ಭವಿಷ್ಯದಲ್ಲಿ ಬದಲಾವಣೆ ಅಗತ್ಯವಾದರೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಚಿವರ ಅನುಮೋದನೆ ಪಡೆದು ತಿದ್ದುಪಡಿ ಮಾಡಲು ಅವಕಾಶ ನೀಡಲಾಗಿದೆ. ಜಿಬಿಎ ವ್ಯಾಪ್ತಿಯಲ್ಲಿ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಸಂಪೂರ್ಣ ವೆಚ್ಚವನ್ನು ಸ್ಥಳೀಯ ಸಂಸ್ಥೆಗಳೇ ಭರಿಸಬೇಕಿರುವುದರಿಂದ, ಈಗಾಗಲೇ ವಿವಿಧ ಅಭಿವೃದ್ಧಿ ಕಾಮಗಾರಿಗಳ ಆರ್ಥಿಕ ಒತ್ತಡ ಎದುರಿಸುತ್ತಿರುವ ಜಿಬಿಎ ಹಾಗೂ ಐದು ನಗರ ಪಾಲಿಕೆಗಳಿಗೆ ಈ ಯೋಜನೆ ಮತ್ತಷ್ಟು ಆರ್ಥಿಕ ಹೊರೆಯಾಗುವ ಸಾಧ್ಯತೆ ಇದೆ.

## ನೇಮಕಾತಿ ಪ್ರಕಟಣೆ

**KPSC ನೇಮಕಾತಿ 2026 ? 319 KAS ಗ್ರೂಪ್ A ಮತ್ತು B ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ**

KPSC ನೇಮಕಾತಿ 2026: ಏಕಖಅಯು 2026–27ನೇ ಸಾಲಿನ 319 ಗ್ರೂಪ್–A ಮತ್ತು B ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳ ನೇಮಕಾತಿ ಅಧಿಸೂಚನೆಯನ್ನು ಪ್ರಕಟಿಸಿದೆ. ಕರ್ನಾಟಕ ಲೋಕಸೇವಾ ಆಯೋಗವು (KPSC) ಆಗಸ್ಟ್ 2026ರ ಅಧಿಕೃತ ಅಧಿಸೂಚನೆಯ ಮೂಲಕ 319 KAS ಗ್ರೂಪ್–A ಮತ್ತು B ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 31–ಆಗಸ್ಟ್–2026 ರೊಳಗೆ ಅಥವಾ ಅಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: kpsc.kar.nic.in

## ಈದ್ ಮಿಲಾದ್ ಶಾಂತಿಯುತ ಆಚರಣೆಗೆ ಪೊಲೀಸ ಇಲಾಖೆ ಸೂಚನೆ

❏ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ಈದ್ ಮಿಲಾದ್ ಹಬ್ಬವನ್ನು ಶಾಂತಿ, ಸೌಹಾರ್ದತೆಯಿಂದ ಆಚರಿಸಬೇಕು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಲ್ಲರೂ ನಿಗಾವಹಿಸಿ ಸಹಕ–ರಿಸಬೇಕು ಎಂದು ಸಿಪಿಐ ವಿಶ್ವನಾಥ ಹಿರೇಗೌಡ ಹೇಳಿದರು.**



ಪಟ್ಟಣದ ಪೊಲೀಸ್ ಠಾಣೆಯಲ್ಲಿ ಗುರುವಾರ ನಡೆದ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು, ಕಾನೂನು ಉಲ್ಲಂಘಿ–ಸುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು. ಮೆರವಣಿಗೆ ಸಂದರ್ಭದಲ್ಲಿ ಅಗತ್ಯ ಪೊಲೀಸ್ ಬಂದೋಬಸ್ತ್ ಹಾಗೂ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದರು. ಪಿಎಸ್‌ಐ ಹನುಮಂತಪ್ಪ ತಳವಾರ ಮಾತನಾಡಿ, ಅಹಿತಕರ ಘಟನೆಗಳನ್ನು ತಡೆಯಲು ಆಯಕಟ್ಟಿನ ಸ್ಥಳಗಳಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗುವುದು. ಸಮುದಾಯದ ಮುಖಂಡರು ಯುವಕರಿಗೆ ಸೂಕ್ತ ಮಾರ್ಗದರ್ಶನ ನೀಡಿ, ಶಾಂತಿ ಕಾಪಾಡಲು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು. ಸಭೆಯಲ್ಲಿ ಮುಸ್ಲಿಂ ಸಮುದಾಯದ ಮುಖಂಡರು ಈದ್ ಮಿಲಾದ್ ಹಬ್ಬವನ್ನುಶಾಂತಿಯುತವಾಗಿ ಆಚರಿಸುವುದಾಗಿ ಭರವಸೆ ನೀಡಿದರು

## ಸಕ್ಕರೆ ಉದ್ಯಮದಲ್ಲಿ ವಿಶಿಷ್ಟ ಸಾಧನೆ: ಸಂಗಮೇಶ ನಿರಾಣಿ ಅವರಿಗೆ ಪ್ರತಿಷ್ಠಿತ ಪ್ರಶಸ್ತಿ

❏ ನೈಜ್ಯ ದೆಸೆ ನ್ಯೂಸ್

**ಮುಧೋಳ: ಭಾರತೀಯ ಸಕ್ಕರೆ ತಂತ್ರಜ್ಞರ ಸಂಸ್ಥೆ (ಎಸ್‌ಟಿಎಐ) ವತಿಯಿಂದ ಸಕ್ಕರೆ ಕಾವೇರಿ/ಸಕ್ಕರೆ ಕಾರ್ಖಾನೆಗಳ ಪ್ರೊಸೆಸಿಂಗ್ ತಂತ್ರಜ್ಞಾನ ಕ್ಷೇತ್ರದಲ್ಲಿ ಸಲ್ಲಿಸಿರುವ ವಿಶಿಷ್ಟ ಸೇವೆಯನ್ನು ಗುರುತಿಸಿ ಪ್ರತಿಷ್ಠಿತ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.**



ಶ್ರೇಷ್ಠ ಉದ್ಯಮಿಗಳು ಹಾಗೂ ಉತ್ತಮ ತಂತ್ರಜ್ಞಾನ ನಾಯಕರ ಸಾಧನೆಯನ್ನು ಗುರುತಿಸುವ ನಿಟ್ಟಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಸಂಗಮೇಶ ಆರ್. ನಿರಾಣಿ ಅವರಿಗೆ ಈ ಗೌರವ ಲಭಿಸಿದೆ. ಶ್ಯಾಮಪ್ರಸಾದ ಮುಖರ್ಜಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಭಾರತೀಯ ಸಕ್ಕರೆ ತಂತ್ರಜ್ಞರ ಸಂಸ್ಥೆಯ 84ನೇ ವಾರ್ಷಿಕ ಸಮ್ಮೇಳನದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಇನ್‌ಸ್ಟಂಟ್ ಗೋಲ್ಡ್ ಮೆಡಲ್ ಎಂಜಿನಿಯರಿಂಗ್ ಫಾರ್ಮ್ ಎಕ್ಸಲೆನ್ಸ್ ವಿಭಾಗದ ಪ್ರಶಸ್ತಿಯನ್ನು ಸಂಗಮೇಶ ನಿರಾಣಿ ಸ್ವೀಕರಿಸಿದರು. ಸಕ್ಕರೆ ಉದ್ಯಮದಲ್ಲಿ ತಾಂತ್ರಿಕ ಪ್ರಗತಿ, ನವೀನತೆ ಹಾಗೂ ಗುಣಮಟ್ಟದ ಸಾಧನೆಗೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಿರುವುದು ಅವರ ಸಾಧನೆಗೆ ಮತ್ತೊಂದು ಗರಿಮೆ ತಂದಿದೆ.

## ಬಾವಿಯಲ್ಲಿ ಇಬ್ಬರು ಮಕ್ಕಳ ಶವ ಪತ್ತೆ, ತಂದೆ ನಾಪತ್ತೆ

❏ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ತಂದೆ ಹಾಗೂ ಇಬ್ಬರು ಮಕ್ಕಳು ಬಾವಿಗೆ ಬಿದ್ದಿದ್ದು, ಮಕ್ಕಳು ಮೃತಪಟ್ಟಿರುವ, ತಂದೆ ನಾಪತ್ತೆಯಾಗಿರುವ ಘಟನೆ ವಿಜಯಪುರ ಜಿಲ್ಲೆಯ ನಿಡಗುಂದಿ ತಾಲ್ಲೂಕಿನ ಬಳಬಟ್ಟಿ ಗ್ರಾಮದಲ್ಲಿ ನಡೆದಿದೆ. ಮೃತ ಬಾಲಕಿಯರನ್ನು ಸಾಕ್ಷಿ (15) ಮತ್ತು ರಕ್ಷಿತಾ (10) ಎಂದು ಗುರುತಿಸಲಾಗಿದೆ. ಇವರ ತಂದೆ ಸಾಬಣ್ಣ ನಾಪತ್ತೆಯಾಗಿದ್ದು, ಅವರಿಗಾಗಿ ಪೊಲೀಸರು ಶೋಧ ಕಾರ್ಯ ನಡೆಸುತ್ತಿದ್ದಾರೆ.**



ಬಳಬಟ್ಟಿ ಗ್ರಾಮದ ತೋಟದ ಮನೆಯಲ್ಲಿ ವಾಸವಾಗಿದ್ದ ಕೃಷಿಕ ಸಾಬಣ್ಣ ಅವರಿಗೆ ನಾಲ್ವರು ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಸೇರಿದಂತೆ ಐವರು ಮಕ್ಕಳಿದ್ದಾರೆ. ನಿನ್ನೆ ಅವರ ಪತ್ನಿ ಇಬ್ಬರು ಹೆಣ್ಣು ಮಕ್ಕಳೊಂದಿಗೆ ಹೊರಗೆ ತೆರಳಿದ್ದರು. ಗಂಡು ಮಗ ಅಜ್ಜನೊಂದಿಗೆ ಇದ್ದನು. ಹೀಗಾಗಿ ಮನೆಯಲ್ಲಿ ಸಾಕ್ಷಿ, ರಕ್ಷಿತಾ ಹಾಗೂ ಸಾಬಣ್ಣ ಮಾತ್ರ ಇದ್ದರು ಎನ್ನಲಾಗಿದೆ. ಏನಾಯಿತು ಎಂಬುದು ತಿಳಿದುಬಂದಿಲ್ಲ. ನಿನ್ನೆ ಸಂಜೆ ಮೂವರು ತೆರೆದ ಬಾವಿಗೆ ಬಿದ್ದಿದ್ದಾರೆ. ವಿಷಯ ತಿಳಿದ ಗ್ರಾಮಸ್ಥರು ಹಾಗೂ ಪೊಲೀಸರು ಸ್ಥಳಕ್ಕೆ ಧಾವಿಸಿ ಶೋಧ ನಡೆಸಿದಾಗ ಇಬ್ಬರು ಬಾಲಕಿಯರ ಶವಗಳು ಪತ್ತೆಯಾಗಿವೆ. ಆದರೆ ಸಾಬಣ್ಣ ಪತ್ತೆಯಾಗಿಲ್ಲ. ಅವರ ಬಟ್ಟೆಗಳು ಬಾವಿಯ ದಡದಲ್ಲಿ ಪತ್ತೆಯಾಗಿವೆ. ಸಾಬಣ್ಣ ತಮ್ಮ ಇಬ್ಬರು ಮಕ್ಕಳನ್ನು ಬಾವಿಗೆ ತಳ್ಳಿ ಬಳಿಕ ಪರಾ–ರಿಯಾಗಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ. ಈ ಕುರಿತು ನಿಡಗುಂದಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

# ಕುರುಗೋಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಏಡ್ಸ್ ಸುರಕ್ಷಾ ಅಭಿಯಾನ

❏ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕುರುಗೋಡು : ಕೇಂದ್ರ ಮತ್ತು ರಾಜ್ಯ ಸರ್ಕಾರ, ರಾಷ್ಟ್ರೀಯ ಆರೋಗ್ಯ ಅಭಿಯಾನ, ಕೆ–ಸ್ಯಾಪ್ ಹಾಗೂ ಜಿಲ್ಲಾ ಮತ್ತು ತಾಲೂಕು ಆರೋಗ್ಯ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಕುರುಗೋಡು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 'ಮೊಬಿಲೈಸೇಷನ್ ಫಾರ್ ಏಡ್ಸ್ ಸುರಕ್ಷಾ ಅಭಿಯಾನ – 2026" ಮತ್ತು ರಾಜ್ಯ ಮಟ್ಟದ ಮಾಸ್ಕಾಟ್ (ಲೋಗೋ) ಸ್ಪರ್ಧೆ ಕುರಿತು ವಿಶೇಷ ಜಾಗೃತಿ ಕಾರ್ಯತ್ರ ಮವನ್ನು ಹಮ್ಮಿಕೊಳ್ಳಲಾಗಿತ್ತು.**

ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲರಾದ ಬಿ. ಶಾಂತಲಾ ಉದ್ಘಾಟಿಸಿ ದರು. ಕುರುಗೋಡು ಸಮುದಾಯ ಆರೋಗ್ಯ ಕೇಂದ್ರದ ಐ.ಸಿ.ಟಿ.ಸಿ. ಆಪ್ತ ಸಮಾಲೋಚಕರಾದ ಕರಿಬಸವ ಎನ್. ಅವರು ಮಾತನಾಡಿ, ಹೆಚ್.ಎ.ವಿ ಸೋಂಕಿನ ಬಗ್ಗೆ ನಿರ್ಲಕ್ಷ್ಯ ವಹಿಸದೆ ಪ್ರತಿಯೊಬ್ಬರೂ ತಮ್ಮ ಹೆಚ್.ಐ.ವಿ ಸ್ಥಿತಿಯನ್ನು ಪರೀಕ್ಷಿಸಿಕೊಳ್ಳಿ ಬೇಕು. ಸರ್ಕಾರಿ ಆಸ್ಪತ್ರೆಗಳ ಐಸಿಟಿಸಿ, ಎಆರ್ಟಿ ಮತ್ತು ಎಸ್ಟಿಐ ಕೇಂದ್ರಗಳಲ್ಲಿ ಸಂಪೂರ್ಣ ಗೌಪ್ಯತೆಯೊಂದಿಗೆ ಉಚಿತ ತಪಾಸಣೆ ಮತ್ತು ಆಪ್ತ ಸಮಾಲೋಚನೆ ಲಭ್ಯವಿದೆ ಎಂದು ವಿದ್ಯಾರ್ಥಿಗಳಿಗೆ ಹೆಚ್.ಐ.ಎ/




ಏಡ್ಸ್ ಕುರಿತು ಸುದೀರ್ಘ ಮಾಹಿತಿ ನೀಡಿದರು. ಉಚಿತ ಸಹಾಯವಾಣಿ ಹಾಗೂ ಹೆಚ್ಚಿನ ಮಾಹಿತಿಗಾಗಿ 1097 ಸಂಖ್ಯೆಗೆ ಅಥ–'ವಾ ತಿತಿತಿ.ಛಡಿಜಚಿಳಇಜಿಡಿಜಜಿಬಟಿಜಬಿ.ಠಡಿರ ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ ವತಿಯಿಂದ ಆಯೋಜಿಸಲಾಗಿರುವ ಮಾಸ್ಕಾಟ್ ಸ್ಪರ್ಧೆಯ ವಿವರಗಳನ್ನು ಇದೇ ಸಂದರ್ಭದಲ್ಲಿ ತಿಳಿಸಿಕೊಡಲಾಯಿತು. ವಿಷಯ & ಮೌಲ್ಯಗಳು: ಭರ ವಸೆ, ಜಾಗೃತಿ ಮತ್ತು ಹೆಚ್.ಐ.ವಿ ತಡೆಗಟ್ಟುವಿಕೆಯನ್ನು ಬಿಂಬಿಸುವ ಕಾಲ್ಪನಿಕ, ನೈಜ ಅಥವಾ ಫ್ಯಾಂಟಿಸಿ ಮಾದರಿಯ ಸ್ವಂತಿಕೆ ಯುಳ್ಳ ವಿನ್ಯಾಸಗಳು. ವಿಜೇತರಿಗೆ 25,000 ನಗದು ಬಹುಮಾನ ನೀಡಲಾಗುವುದು (ಅಂತಿಮ ಆಯ್ಕೆ ಏಖಂಕಖ ತೀರ್ಮಾನಕ್ಕೆ ಒಳಪಟ್ಟಿ ರುತ್ತದೆ. ನಿಮ್ಮ ವಿನ್ಯಾಸದ ಮೇಲೆ ಕಡ್ಡಾಯವಾಗಿ ಹೆಸರು ಮತ್ತು ಮೊಬೈಲ್ ಸಂಖ್ಯೆಯನ್ನು ನಮೂದಿಸಿ, ಉತ್ತಮ ಗುಣಮಟ್ಟದ



ಸ್ಕ್ಯಾನ್ ಪ್ರತಿಯನ್ನು ksapsmascot@gmail.com ವಿಳಾಸಕ್ಕೆ ಇ–ಮೇಲ್ ಮಾಡಬೇಕು. ಆಗಸ್ಟ್ 31 ಕೊನೆಯ ದಿನವಾಗಿದೆ ಎಂದು ವಿವರಿಸಲಾಯಿತು.

ಕಾರ್ಯಕ್ರಮದಲ್ಲಿ ಮಂಜುನಾಥ ಪ್ರಾಸ್ತಾವಿಕವಾಗಿ ಮಾತನಾ ಡಿದರು. ಉಪನ್ಯಾಸಕ ವೀರಲಿಂಗಪ್ಪ ಕಾರ್ಯಕ್ರಮ ನಿರೂಪಿಸಿದರು. ಉಪನ್ಯಾಸಕ ವಿಶ್ವನಾಥ, ಪ್ರಥಮ ದರ್ಜೆ ಸಹಾಯಕ ಗಣೇಶ್, ಸ್ನೇಹಾ ಕ್ಲಿನಿಕ್ ಆಪ್ತ ಸಮಾಲೋಚಕ ಮಹಬೂಬ್ ಭಾಷಾ, ಸಿಬ್ಬಂದಿಗಳಾದ ಗೋವರ್ಧನ್, ಗಾದಿಲಿಂ ಗಪ್ಪ ಹಾಗೂ ಕಾಲೇಜಿನ ವಿದ್ಯಾರ್ಥಿ–ವಿ ದ್ಯಾರ್ಥಿನಿಯರು ಉಪಸ್ಥಿತರಿದ್ದರು.

## ಬಲಿಜ ಸಮಾಜದಿಂದ ಶ್ರೀ ಯೋಗಿ ನಾರಾಯಣ ಯತೇಂದ್ರರ ಭವ್ಯ ಮೆರವಣಿಗೆ; ವಿಶೇಷ ಧಾರ್ಮಿಕ ಕಾರ್ಯಕ್ರಮ ಸಂಪನ್ನ

❏ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಪಟ್ಟಣದಲ್ಲಿ ಶನಿವಾರ ರಂದು ಬಲಿಜ ಸಮಾಜದ ಬಾಂಧವರಿಂದ ವಿಶೇಷ ಧಾರ್ಮಿಕ ಕಾರ್ಯಕ್ರಮವು ಅತ್ಯಂತ ಭಕ್ತಿ–ಭಾವ ಮತ್ತು ಸಡಗರದಿಂದ ನೆರವೇರಿತು.**

ಕಾರ್ಯಕ್ರಮದ ಅಂಗವಾಗಿ ಪಟ್ಟಣದ ಐತಿಹಾಸಿಕ ಕೋಟೆ ಭಾಗದ ತುಂಗಭದ್ರಾ ನದಿಯ ದಂಡೆಯಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಅಲ್ಲಿಂದ ಶ್ರೀ ಯೋಗಿ ನಾರಾಯಣ ಯತೇಂದ್ರರ ಭಾವಚಿತ್ರದ ಭವ್ಯ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿತ್ತು. ನದಿಯ ದಂಡೆಯಲ್ಲಿ ಪೂಜೆ ನೆರವೇರಿದ ಬಳಿಕ,



ಶ್ರೀಗಳ ಭಾವಚಿತ್ರದೊಂದಿಗೆ ಪವಿತ್ರ ಗಂಗಸ್ಥಳವನ್ನು ಭಕ್ತಿಪೂರ್ವಕವಾಗಿ ಹೊತ್ತು ಮೆರವಣಿಗೆ ನಡೆಸಲಾಯಿತು. ಈ ಭವ್ಯ ಮೆರವಣಿಗೆಯು ಕಂಪ್ಲಿಯ ಮುಖ್ಯ ಬಜಾರ್ (ಮೇನ್ ಬಜಾರ್) ರಸ್ತೆಯ ಮೂಲಕ ಸಾಗಿ ಮಾರುತಿನಗರದ ಬಲಿಜ ಭವನದಲ್ಲಿ ಸಂಪನ್ನಗೊಂಡಿದೆ. ಮೆರವಣಿಗೆ ಯುದ್ದಕ್ಕೂ ಜಯಘೋಷಗಳು ಮೊಳಗಿದವು. ಬಲಿಜ ಸಮಾಜದ ಪ್ರಮುಖರು, ಮಹಿಳೆಯರು ಹಾಗೂ ಯುವಕರು ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದರು. ಅಂತಿಮವಾಗಿ ಮಾರುತಿನಗರದ ಶಿಬ್ರದಿನ್ನಿಯಲ್ಲಿರುವ ಬಲಿಜ ಭವನದ ಆವರಣಕ್ಕೆ ಗಂಗಸ್ಥಳವನ್ನು ತರಲಾಯಿತು. ಅಲ್ಲಿ ವಿವಿಧ ಧಾರ್ಮಿಕ ವಿಧಿವಿಧಾನ ಹಾಗೂ ಪೂಜಾ ಕಾರ್ಯಕ್ರಮಗಳೊಂದಿಗೆ ಇಡೀ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಳಿಸಲಾಯಿತು.

# ನಾಗೋಲಿ ಗ್ರಾಮದಲ್ಲಿನ ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಜಾತ್ರೆ

❏ ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲೂಕಿನ ಮಲ್ಲೇದೇವರಗುಡ್ಡ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿಬರುವ ನಾಗೋಲಿ ಗ್ರಾಮದಲ್ಲಿ ಶ್ರೀಬೀರಲಿಂಗೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ಅಂಗವಾಗಿ ಪವಿತ್ರ ಸಂದರ್ಭದಲ್ಲಿ ವಿಶೇಷ ಜಾತ್ರರೆಯನ್ನು ಆಚರಿಸಲಾಗುತ್ತಿದೆ.**

ಈ ಸಂದರ್ಭದಲ್ಲಿ ಭಕ್ತರು ಪವಿತ್ರ ಜಲವನ್ನು ತಂದು ದೇವರ ಮೂರ್ತಿಗೆ ಶ್ರದ್ಧಾಬಕ್ತಿಯಿಂದ ಅಬೀಷೇಕ ಮಾಡುತ್ತಾರೆ. ಶ್ರಾವಣ ಮಾಸದ ಈ ಶುಭ ಸಂದರ್ಭದಲ್ಲಿ ಗ್ರಾಮಸ್ಥರು ಮತ್ತು ಭಕ್ತರು ದೇವಸ್ಥಾನದಿಂದ



ಗಂಗಾಸ್ಥಳಕ್ಕೆ ಹೋಗುತ್ತಾರೆ ಡೊಳ್ಳು,ಮೇಳ ಮತ್ತು ವ್ಯಾದಗಳೊಂದಿಗೆ ಮೆರವಣಿಗೆ ಮೂಲಕ ಸಾಗಿ ಊರಿನ ಹೊರಗಡೆಯಿರುವ ಶಿವನಕಟ್ಟೆಯಿಂದ ದೇವಸ್ಥಾನದವರಗೆ ಪಲ್ಲಕಿ ಎರವಣಿಗೆಯನ್ನು ನಡೆಸುತ್ತಾರೆ.

ಈ ಪಲ್ಲಕಿಯ ಜೋತೆಯಲ್ಲಿ ಭಕ್ತರು ಗ್ರಾಮಸ್ಥರು ಗಂಗಾಜಲ ತಂದು ದೇವರಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಈ ಸಂದರ್ಭದಲ್ಲಿ ಭಕ್ತರು ಜ್ಯೋತಿ ಕಾರ್ಯಕ್ರಮ ಮತ್ತು ಧೀಡು ನಮಸ್ಕಾರಗಳು ಹಾಕಿ ಉರುಳು ಸೇವೆಗಳ ಮೂಲಕ ತಮ್ಮ ಭಕ್ತಿಯನ್ನು ಸಮರ್ಪಿಸುತ್ತಾರೆ. ಮಧ್ಯಾಹದನ ಸಮಯದಲ್ಲಿ ಪಂಜಿನ ಮೆರವಣಿಗೆಯನ್ನು ಆಯೋಜಿಸಲಾಗುತ್ತದೆ. ಉರಿಯುತ್ತಿರುವ ಪಂಜುಗಳನ್ನು ಹಿಡಿದು ಭಕ್ತರು ಸಂಭ್ರಮದಿಂದ ಮೆರೌಣಿಗೆಯಲ್ಲಿ ಪಾಲ್ಗೋಳ್ಳುತ್ತಾರೆ. ನಂತರ ದೇವಸ್ಥಾನದ ಎದುರು ನಿರ್ಮಿಸಲಾದ ಅಗ್ನಿಕುಂಡದಲ್ಲಿ ಬೆಂಕಿ ತುಇಯುವ ಕಾರ್ಯಕ್ರಮ ನಡೆಯತ್ತದೆ. ಬಳಿಕ ಪೂಜಾರಿಗಳು ಹೇಳಿಕೆ ಹೇಳುವ ಮೂಲಕ ಕಾರ್ಯಕ್ರಮಕ್ಕೆ ವಿಧ್ಯುಕ್ತ ಮುಕ್ತಾಯ ಹೇಳುತ್ತಾರೆ. ದೇವಸ್ಥಾನಕ್ಕೆ ಆಗಮಿಸುತ್ತಿರುವ ಎಲ್ಲಾ ಭಕ್ತಾಧಿಗಳಿಗೆ ಬೆಳಿಗ್ಗೆಯಿಂದ ಸಂಜೆಯವರೆಗೂ ಪ್ರಸಾದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗುತ್ತಿದೆ ಕಾರಣ ಈ ಜಾತ್ರೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀ ಬೀರಲಿಂಗೇಶ್ವರ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕೆಂದು ಗ್ರಾಮಸ್ಥರು ತಿಳಿಸಿದ್ದಾರೆ.

# ಅಶ್ವಿನಿ ಕುಟುಂಬಕ್ಕೆ ರಾಜಾ ವೆಂಕಟಪ್ಪ ನಾಯಕ ಭೇಟಿ 25 ಸಾವಿರ ಸಹಾಯಧನ

❏ ನೈಜ್ಯ ದೆಸೆ ನ್ಯೂಸ್

**ಸಿರವಾರ: ತಾಲೂಕಿನ ಹೊಕ್ರಾಣಿ ಗ್ರಾಮದಲ್ಲಿ ಯುವತಿ ಕು. ಅಶ್ವಿನಿ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಿರುವ ಘಟನೆಗೆ ಸಂಬಂಧಿಸಿದಂತೆ ನಿಕಟಪೂರ್ವ ಶಾಸಕರಾದ ಶ್ರೀ ರಾಜಾ ವೆಂಕಟಪ್ಪ ನಾಯಕ ದೊರೆ ಅವರು ಸಂತ್ರಸ್ತ ಯುವತಿಯ ಮನೆಗೆ ಭೇಟಿ ನೀಡಿ, ಕುಟುಂಬಸ್ಥ–ರಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿದರು.**

ಕೊಲೆಯಾದ ಕು. ಅಶ್ವಿನಿಯ ತಂದೆ–ತಾಯಿಯೊಂದಿಗೆ ಮಾತನಾಡಿದ ರಾಜಾ ವೆಂಕಟಪ್ಪ ನಾಯಕ ಅವರು, ದುಃಖದ ಸಂದರ್ಭದಲ್ಲಿ ಕುಟುಂಬದೊಂದಿಗೆ ನಾವಿದ್ದೇವೆ ಎಂದು ಭರವಸೆ ನೀಡಿದರು. ಘಟನೆ ಕುರಿತು ತೀವ್ರ ಆಘಾತ ವ್ಯಕ್ತಪಡಿಸಿದ ಅವರು, ಕುಟುಂಬಸ್ಥರಿಗೆ ಧೈರ್ಯ ತುಂಬಿ, ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಅಗತ್ಯ ಸಹಕಾರ ನೀಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಕುಟುಂಬಕ್ಕೆ 25,000 ಸಹಾಯಧನ ನೀಡಿದರು. ಯುವತಿಯ ಕುಟುಂಬಕ್ಕೆ ನ್ಯಾಯ ದೊರಕಬೇಕು ಹಾಗೂ ಇಂತಹ ಅಮಾನವೀಯ ಘಟನೆಗಳು ಮರುಕಳಿಸದಂತೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಯುವ ಘಟಕದ ರಾಜ್ಯ ಉಪಾಧ್ಯಕ್ಷ ರಾಜಾ ರಾಮಚಂದ್ರ ನಾಯಕ, ಜೆಡಿಎಸ್ ಪಕ್ಷದ ಮಾನ್ವಿ ತಾಲೂಕು ಅಧ್ಯಕ್ಷ ಈರಣ್ಣ ಮರ್ಲಟ್ಟಿ, ಸಿರವಾರ ತಾಲೂಕು ಅಧ್ಯಕ್ಷ ಟಿ. ಮಲ್ಲಿಕಾರ್ಜುನ ಪಾಟೀಲ್ ಬಲ್ಲಟಗಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಸುಗುರಯ್ಯ ಸ್ವಾಮಿ ಗಣದಿನ್ನಿ, ರಾಜಾ ಆದರ್ಶ ನಾಯಕ, ಚನ್ನಬಸಯ್ಯ ಸ್ವಾಮಿ, ಮಲ್ಲಪ್ಪ ಹೂಗಾರ್, ನಗರ ಘಟಕದ ಅಧ್ಯಕ್ಷ ಹೆಚ್. ಮೌನೇಶ್ ಗೌಡ, ಪರ್ವತರೆಡ್ಡಿ ಹೊಕ್ರಾಣಿ, ನಾಗರಾಜ ಯಾದವ್, ವಜ್ರದಯ್ಯ ನಾಯಕ, ನಾಗರಾಜ್ ನಾಯಕ ಬೇವಿನೂರು, ಶರಣಪ್ಪ ಮೇಟಿ ಕಲ್ಲೂರು, ಧನಂಜಯ ಕಲ್ಲೂರು, ಮೌಲಸಾಬ್, ಬಸವರಾಜ್ ಸ್ವಾಮಿ,



ಸಾಜಿದ್ ಪಾಷಾ, ಸಂತೋಷ್ ಹೂಗಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಜಾಲಹಳ್ಳಿ ಅಪಘಾತದಲ್ಲಿ ಮೃತ ವಿದ್ಯಾರ್ಥಿಗಳ ಕುಟುಂಬದ ಮನೆಗಳಿಗೆ ಭೇಟಿ ನೀಡಿ ಶಾಸಕಿ ಕರೆಮ್ಮ ಜಿ. ನಾಯಕ ಸಾಂತ್ವನ

❏ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ/ದೇವದುರ್ಗ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣದಲ್ಲಿ ಗುರುವಾರ ರಾತ್ರಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮೃತಪಟ್ಟ ಇಬ್ಬರು ವಿದ್ಯಾರ್ಥಿಗಳ ಮನೆಗಳಿಗೆ ಶಾಸಕಿ ಕರೆಮ್ಮ ಜಿ. ನಾಯಕ ಅವರು ಶನಿವಾರ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.**

ಮೊದಲು ಮೃತ ವಿದ್ಯಾರ್ಥಿ ಉದಯ ಅವರ ಮನೆಗೆ ಭೇಟಿ ನೀಡಿದ ಶಾಸಕರು, ಕುಟುಂಬದವರೊಂದಿಗೆ ಮಾತನಾಡಿ ದುಃಖ ಹಂಚಿಕೊಂಡರು. ಬಳಿಕ ಮೃತ ವಿದ್ಯಾರ್ಥಿ ವಿಜಯ್ ಅವರ ಮನೆಗೂ ಭೇಟಿ ನೀಡಿ ಪಾಲಕರಿಗೆ ಸಾಂತ್ವನ ಹೇಳಿದರು. ಎರಡೂ ಕುಟುಂಬಗಳ ಪಾಲಕರು ಈ ಸಂದರ್ಭದಲ್ಲಿ ಮನೆಯಲ್ಲಿ ಹಾಜರಿದ್ದರು. "ಈ ದುರ್ಘಟನೆಯಿಂದ ಮನಸ್ಸಿಗೆ ಬಹಳ ನೋವಾಗಿದೆ. ಮೃತ ವಿದ್ಯಾರ್ಥಿಗಳ ಕುಟುಂಬಗಳಿಗೆ ಸರ್ಕಾರದಿಂದ ಅಗತ್ಯ




ಸಹಾಯಧನ ದೊರಕಿಸಲು ಪ್ರಯತ್ನಿಸಲಾಗುವುದು" ಎಂದು ಶಾಸಕಿ ಕರೆಮ್ಮ ಜಿ. ನಾಯಕ ಅವರು ಕುಟುಂಬಸ್ಥರಿಗೆ ಭರವಸೆ ನೀಡಿದರು.

ಶಾಸಕರ ಭೇಟಿ ಕುರಿತು ವರದಿಗಾರರೊಂದಿಗೆ ಮಾತನಾಡಿದ ತಾಲೂಕು ಜೆಡಿಎಸ್ ಕಾರ್ಯಾಧ್ಯಕ್ಷ ಶಿವನಗೌಡ ಜಾಲಹಳ್ಳಿ ಅವರು, ಅಪಘಾತದಿಂದ ಎರಡು ಕುಟುಂಬಗಳು ದುಃಖದಲ್ಲಿದ್ದು, ಅವರಿಗೆ ಸರ್ಕಾರದಿಂದ ಸೂಕ್ತ ನೆರವು ದೊರಕಬೇಕಾಗಿದೆ ಎಂದು ತಿಳಿಸಿದರು.



ಈ ಸಂದರ್ಭದಲ್ಲಿ ತಾಲೂಕು ಜೆಡಿಎಸ್ ಅಧ್ಯಕ್ಷ ಬಸನಗೌಡ ದೇಸಾಯಿ, ತಾಲೂಕು ಜೆಡಿಎಸ್ ಕಾರ್ಯದರ್ಶಿ ಗೋವಿಂದರಾಜ ತಿಂಪುರ್, ತಾಲೂಕು ಎಸ್‌ಟಿ ಮೋರ್ಚಾ ಅಧ್ಯಕ್ಷ ಶಿವನಗೌಡ ಜಾಲಹಳ್ಳಿ, ಜೆಡಿಎಸ್ ಎಸ್‌ಸಿ ಮೋರ್ಚಾ ತಾಲೂಕು ಅಧ್ಯಕ್ಷ ಹುಸೇನಪ್ಪ ಗುತ್ತೇದಾರ್, ಜೆಡಿಎಸ್ ಮುಖಂಡ ನಾರಾಯಣ ಯರಗುಡ್ಡ, ಗ್ರಾಮದ ಮುಖಂಡರಾದ ದಂಡಪ್ಪ ಕಾರ್ಪೆಂಟರ್, ಭೂತಪ್ಪ ದೇವರಮನೆ, ರಾಮಪ್ಪ ತವಗ, ಶಿವಪ್ಪ ಮ್ಯಾಗೇರಿ ಸೇರಿದಂತೆ ಗ್ರಾಮದ ಸಾರ್ವಜನಿಕರು ಉಪಸ್ಥಿತರಿದ್ದರು.

## ವಚನ ದರ್ಶನ –6.

ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ.
ಇವ ನಮ್ಮವ, ಇವ ನಮ್ಮವ,ಇವನಮ್ಮವನೆಂದೆನಿಸಯ್ಯಾ
ಕೂಡಲಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ

ಇವನಾರವ ಇವನಾರವ ವಿಶ್ವಗುರು ಶ್ರೀ ಬಸವಣ್ಣನವರ ಪ್ರಸಿದ್ಧ ವಚನವಾಗಿದೆ. ಈ ವಚನವು ಜಾತಿ, ಮತ, ಪಂಥಗಳ ಭೇದಭಾವವನ್ನು ತೊಡೆದುಹಾಕಿ, ಪ್ರತಿಯೊಬ್ಬರನ್ನು ಮಾನವೀಯತೆಯ ದೃಷ್ಟಿಯಿಂದ 'ನಮ್ಮವರು' ಎಂದು ಕಾಣಬೇಕೆಂಬ ಸಾರ್ವತ್ರಿಕ ಸಂದೇಶವನ್ನು ಸಾರುತ್ತದೆ. ಇದು ವಿಶ್ವಮಾನವ ತತ್ವದ ಪ್ರಮುಖ ಪ್ರತೀಕವಾಗಿದೆ.

ವ್ಯಕ್ತಿತ್ವದ ಕಡೆಗಣನೆ ಇವನಾರವ ಒಬ್ಬ ವ್ಯಕ್ತಿಯನ್ನು ನೋಡಿದಾಗ "ಇವನು ಯಾವ ಜಾತಿಯವನು? ಯಾವ ವರ್ಗದವನು?" ಎಂದು ಸಂಕುಚಿತ ಮನೋಭಾವದಿಂದ ಅಥ–ವಾ ಅನುಮಾನದಿಂದ ಯೋಚಿಸಬಾರದು.ವಿಶ್ವಮಾವ ಸಂದೇಶ ಇವ ನಮ್ಮವ ಆತನು ತನ್ನವನು, ನಮ್ಮ ಕುಟುಂಬದ ಸದಸ್ಯನೇ ಎಂದು ಪ್ರೀತಿ, ಸಮಾನತೆ ಹಾಗೂ ಭ್ರಾತೃತ್ವದ ಭಾವನೆಯಿಂದ ಕಾಣಬೇಕು. ದೈವಿಕ ಸಂಬಂಧ ಎಲ್ಲ ಮಾನವರೂ ಆ ದೇವರ ಕೂಡಲಸಂಗಮದೇವನ ಸೃಷ್ಟಿ. ಹಾಗಾಗಿ ಪ್ರತಿಯೊಬ್ಬರನ್ನು ದೇವಸ್ಥಾನದ ಅಥವಾ ದೇವರ ಮನೆಯ ಮಗನೆಂದು ಗೌರವಿಸಬೇಕು. ನಮ್ಮ ಆಲೋಚನೆಗಳು ಪರಿಶುದ್ಧವಾಗಿರಬೇಕು.

ಭೇದಭಾವ ಬೇಡ ಯಾರೂ ಹೊರಗಿನವರಲ್ಲ ಅಥ–ವಾ ಪರಕೀಯರಲ್ಲ ಎಂದು ಪ್ರಶ್ನಿಸುತ್ತಾ ಯಾರ ಬಗ್ಗೆಯೂ 'ಇವನಾರವ' ಇವನು ಯಾರು ಎಂದು ಕೀಳಾಗಿ ಅಥವಾ ಅಂತರ ಕಾಯ್ದುಕೊಂಡು ನೋಡಬಾರದು. ವಿಶ್ವ ಬಂಧುತ್ವ ಎಲ್ಲರೂ ನಮ್ಮವರೇ ಎಂಬ ಭಾವನೆಯನ್ನು ಬೆಳೆಸಿಕೊಳ್ಳಬೇಕು. 'ಇವ ನಮ್ಮವ' ಎಂದು ಅಪ್ಪಿಕೊಳ್ಳುವ ಪ್ರೀತಿ ಮತ್ತು ವಿಶಾಲತೆ ಇರಬೇಕು.
ದೈವಿಕ ಒಡನಾಟ ಇಂತಹ ಸಮಾನತೆಯ ಗುಣವುಳ್ಳವನೇ ನಿಜವಾದ ಭಕ್ತನಾಗಿದ್ದು, ಆ ದೇವನು ಕೂಡಲಸಂಗಮದೇವ ಅಂಥವರ ಸ್ವಂತದವನಾಗುತ್ತಾನೆ.ನಾವು ನೀವು ಬಸವಾದಿ ಶರಣರ ವಚನ ಪಚನ ಮಾಡಿಕೊಳ್ಳೋಣ ಸರ್ವರಿಗೂ ಶರಣು ಶುಭಾಶಯಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ–ಸಿಂಧನೂರು. 998094144

## ನೂತನ ಕ್ಷೇತ್ರ ಶಿಕ್ಷಣಾಧಿಕಾರಿ ಬಡದಾನಿಗೆ ಗೌರವ ಸತ್ಕಾರ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಮುದ್ದೇಬಿಹಾಳ ಕ್ಷೇತ್ರ ಶಿಕ್ಷಣಾಧಿಕಾ–ರಿಯಾಗಿ ನೂತನವಾಗಿ ಪದಗ್ರಹಣ ಮಾಡಿರುವ ಎಂ.ಎಸ್.ಬಡದಾನಿ ಹಾಗೂ ಕ್ಷೇತ್ರ ಸಮನ್ವಯ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಆರ್.ಬಿ.ದಮ್ಮೂರಮಠ ಇವರನ್ನು ತಾಳಿಕೋಟಿ ತಾಲೂಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ಶುಕ್ರವಾರ ಸನ್ಮಾನಿಸಿ ಗೌರವಿಸಲಾಯಿತು.



ಸಂಘದ ಪದಾಧಿಕಾರಿಗಳ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ನೂತನ ಬಿಇಓ ಬಡದಾನಿ ಅವರು ಕ್ಷೇತ್ರದಲ್ಲಿರುವ ಎಲ್ಲಾ ಶಾಲೆಗಳು ಇನ್ನೂ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುವಂತಾಗಲು ನನಗೆ ನಿಮ್ಮೆಲ್ಲರ ಸಹಕಾರದ ಅಗತ್ಯವಿದೆ, ಈ ನಿಟ್ಟಿನಲ್ಲಿ ನಾವೆಲ್ಲರೂ ಒಂದಾಗಿ ಕೆಲಸ ಮಾಡೋಣ ಎಂದರು. ಈ ಸಮಯದಲ್ಲಿ ತಾಲೂಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಬಿ.ಟಿ.ವಜ್ಜಲ್, ಉಪಾಧ್ಯಕ್ಷ ಟಿ.ಹೆಚ್.ಲಮಾಣಿ, ಪ್ರಧಾನ ಕಾರ್ಯದರ್ಶಿ ಎಸ್.ಬಿ.ಬೀರಗೊಂಡ, ಪತ್ತು ಬೆಳೆಸುವ ಸಹಕಾರಿ ಸಂಘದ ಅಧ್ಯಕ್ಷ ಸುರೇಶ ವಾಲಿಕಾರ, ಪ್ರಾ. ಶಾ.ಶಿ.ಸಂಘದ ಉಪಾಧ್ಯಕ್ಷೆ(ಮಹಿಳಾ) ರೇಣುಕಾ ಬಸಪ್ಪ ಆಲೂರ, ಸಹ ಕಾರ್ಯದರ್ಶಿ(ಮಹಿಳಾ) ಸರಸ್ವತಿ ಬನ್ನೆಟ್ಟಿ, ಕೋಶಾಧ್ಯಕ್ಷ ಆರ್ ಎಸ್ ಹಿಪ್ಪರಗಿ, ಸಹ ಕಾರ್ಯದರ್ಶಿ ಅಲ್ತಾಫ್ ನಗಾರ್ಚಿ, ಸಹ ಕಾರ್ಯದರ್ಶಿ ಎನ್.ಕೆ.ಸಿಪಾಯಿ, ಸಂಘಟನಾ ಕಾರ್ಯದರ್ಶಿ (ಮಹಿಳಾ) ನೀಲಮ್ಮ ಮೈಲೇಶ್ವರ, ಶ್ರೀಶೈಲ ನಾಯ್ಕೋಡಿ, ಶಿಕ್ಷಕ ಆರ್ ಎಲ್ ಕುಲಕರ್ಣಿ ಮತ್ತಿತರರು ಇದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಉದ್ಭವ ಅಂಜನೇಯ ಸ್ವಾಮಿ ದೇವಸ್ಥಾನದ 23ನೇ ವಾರ್ಷಿಕೋತ್ಸವದಲ್ಲಿ ರಾಜಾ ವೆಂಕಟಪ್ಪ ನಾಯಕ ಭಾಗಿ

❑ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ಶ್ರೀ ಉದ್ಭವ ಅಂಜನೇಯ ಸ್ವಾಮಿ ದೇವಸ್ಥಾನದ 23ನೇ ವಾರ್ಷಿಕೋತ್ಸವದ ಪ್ರಯುಕ್ತ ಹಮ್ಮಿಕೊಂಡಿದ್ದ ಧಾರ್ಮಿಕ ಕಾರ್ಯಕ್ರಮದಲ್ಲಿ ಮಾನ್ವಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರಾದ ರಾಜಾ ವೆಂಕಟಪ್ಪ ನಾಯಕ ಭಾಗವಹಿಸಿ, ಶ್ರೀ ಅಂಜನೇಯ ಸ್ವಾಮಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ದೇವಸ್ಥಾನಕ್ಕೆ ಆಗಮಿಸಿದ ರಾಜಾ ವೆಂಕಟಪ್ಪ ನಾಯಕ ಅವರನ್ನು ದೇವಸ್ಥಾನದ ಪದಾಧಿಕಾರಿಗಳು ಹಾಗೂ ಭಕ್ತರು ಆತ್ಮೀಯವಾಗಿ ಸ್ವಾಗತಿಸಿ ಸನ್ಮಾನಿಸಿದರು. ಬಳಿಕ ನಡೆದ ಅನ್ನಸಂತರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಭಕ್ತರಿಗೆ ಪ್ರಸಾದ



ವಿತರಿಸಿದರು. ಶ್ರೀ ಉದ್ಭವ ಅಂಜನೇಯ ಸ್ವಾಮಿಯ ಕೃಪೆಯಿಂದ ಮಾನ್ವಿ ವಿಧಾನಸಭಾ ಕ್ಷೇತ್ರದ ಸಮಸ್ತ ಜನತೆಗೆ ಸುಖ, ಶಾಂತಿ, ಉತ್ತಮ ಆರೋಗ್ಯ ಹಾಗೂ ಸಮೃದ್ಧಿ ದೊರೆಯಲಿ ಎಂದು ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಯುವ ಘಟಕದ ರಾಜ್ಯ ಉಪಾಧ್ಯಕ್ಷ ರಾಜಾ ರಾಮಚಂದ್ರ ನಾಯಕ, ನಗರ ಘಟಕದ ಅಧ್ಯಕ್ಷ ಎಚ್. ಮೌನೇಶ್ ಗೌಡ, ಪುರಸಭೆ ಸದಸ್ಯ ಶರಣಪ್ಪ ಮೇದಾ, ಚನ್ನಬಸಯ್ಯ ಸ್ವಾಮಿ, ರೈತ ಘಟಕದ ಅಧ್ಯಕ್ಷ ಶರಣಪ್ಪ ಗೌಡ ಮದ್ಲಾಪೂರ, ಮೌನೇಶ್ ನಾಯಕ, ಸಂತೋಷ ಹೂಗಾರ್, ದೇವಸ್ಥಾನದ ಸಮಿತಿ ಸದಸ್ಯರಾದ ಬಿ.ಟಿ.ರಾಘವೇಂದ್ರ ಶೆಟ್ಟಿ, ನಾಗರಾಜ್ ನಾಯಕ, ಸುದರ್ಶನ್, ಗಾಣದಾಳ್ ಆಂಜನೇಯ, ಯಲ್ಲಪ್ಪ ಕಾಮರೆಡ್ಡಿ, ಎಸ್. ಚಂದ್ರಶೇಖರ ಸೇರಿದಂತೆ ದೇವಸ್ಥಾನದ ಸಮಿತಿ ಸದಸ್ಯರು, ಮುಖಂಡರು, ಕಾರ್ಯಕರ್ತರು ಹಾಗೂ ಭಕ್ತರು ಉಪಸ್ಥಿತರಿದ್ದರು.

# ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ನಿಗೂಢ ನಾಪತ್ತೆ!

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಕೆಪಿಎಸ್‌ಸಿ ಕರ್ಮಕಾಂಡದ ವಿಚಾರಣೆ ನಡೆಯುತ್ತಿರುವ ಬೆನ್ನಲ್ಲೇ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ನಿಗೂಢವಾಗಿ ನಾಪತ್ತೆಯಾಗಿರುವ ಪ್ರಕರಣ ಕುತೂಹಲ ಕೆರಳಿಸಿದೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ–ಕ್ಕೆ ತೆರಳಿದ್ದ ಅವರು ಗುರುವಾರ ಬೆಳಗ್ಗೆ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದು, ಬಳಿಕ ಅವರ ಬಗ್ಗೆ ಯಾವುದೇ ಸುಳಿವು ಲಭ್ಯವಾಗಿಲ್ಲ. ಜ್ಞಾನೇಂದ್ರ ಕುಮಾರ್ ಅವರು ದೆಹಲಿಗೆ ತೆರಳಲು ವಿಮಾನದ ಟಿಕೆಟ್ ಬುಕ್ ಮಾಡಿದ್ದರು ಎನ್ನಲಾಗಿದೆ.



ದೆಹಲಿಗೆ ತೆರಳುವುದಾಗಿ ತಿಳಿಸಿ ವಿಮಾನ ನಿಲ್ದಾಣಕ್ಕೆ ತೆರಳಿದ್ದ ಅವರು, ಅಲ್ಲಿಂದ ವಿಮಾನ ಏರಿ ದೆಹಲಿ ತಲುಪಿದ ಬಳಿಕ ನಿಗೂಢವಾಗಿ ನಾಪತ್ತೆಯಾಗಿದ್ದಾರೆ ಎನ್ನಲಾಗುತ್ತಿದೆ. ವಿಮಾನ ನಿಲ್ದಾಣದವರೆಗೆ ಅವರ ಚಲನವಲನವನ್ನು ಪೊಲೀಸರು ಟ್ರ್ಯಾಕ್ ಮಾಡಿದ್ದು, ಬಳಿಕ ಅವರ ಮೊಬೈಲ್ ಸಂಪರ್ಕ ಕಡಿತಗೊಂಡಿದೆ ಎಂದು ತಿಳಿದುಬಂದಿದೆ. ದೆಹಲಿ ತಲುಪಿದ ಬಳಿಕ ಮೊಬೈಲ್ ಫೋನ್ ಸ್ವಿಚ್ ಆಫ್ ಆಗಿರುವ ಹಿನ್ನೆಲೆಯಲ್ಲಿ ಪೊಲೀಸರು ಹಲವು ಸಾಧ್ಯತೆಗಳ ಕುರಿತು ಪರಿಶೀಲನೆ ನಡೆಸುತ್ತಿದ್ದಾರೆ. ಕುಟುಂಬದವರ ಸಂಪರ್ಕಕ್ಕೂ ಅವರು ಸಿಗದಿರುವುದು ಪ್ರಕರಣದ ಗಂಭೀರತೆಯನ್ನು ಹೆಚ್ಚಿಸಿದೆ.

ಜ್ಞಾನೇಂದ್ರಕುಮಾರ್ ಅವರಿಗೆ ಈ ಹಿಂದೆ ಆರೋಗ್ಯ ಸಮಸ್ಯೆ ಇತ್ತು ಎಂಬ ಮಾಹಿತಿಯೂ ಲಭ್ಯವಾಗಿದೆ. ಸದ್ಯ ಅವರು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಇಲಾಖೆಯ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಹಿಂದೆ ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ಸೇವೆ ಸಲ್ಲಿಸಿದ್ದರು. ಹಿರಿಯ ಅಧಿಕಾರಿಗಳ ಮಾಹಿತಿ ಮೇರೆಗೆ ಪೊಲೀಸರು ಶೋಧ ಕಾರ್ಯ ಮುಂದುವರಿಸಿದ್ದಾರೆ.

ಪ್ರಕರಣ ಗಂಭೀರ ಪರಿಗಣನೆ ಜ್ಞಾನೇಂದ್ರ ಕುಮಾರ್ ನಾಪತ್ತೆಯಾಗಿರುವ ಬಗ್ಗೆ ಹಿರಿಯ ಐಎಎಸ್ ಅಧಿಕಾರಿಯೊಬ್ಬರು ನನಗೆ ಮಾಹಿತಿ ನೀಡಿದ್ದಾರೆ. ಆದ–ರೆ ಈ ಸಂಬಂಧ ಯಾವುದೇ ದೂರು ನೀಡಿಲ್ಲ.

## ಹನೂರು ಗಲಭೆಗೆ ಹಿಂದೆ ಮರಿ ವೀರಪ್ಪನ್ ಕೈವಾಡ..!?

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಹನೂರಿನಲ್ಲಿ ನಡೆದ ಶೂಟೌಟ್ ಘಟನೆ ನಂತರದಲ್ಲಿ ನಡೆದ ಅಹಿತಕರ ಘಟನೆಗಳಿಗೆ ಮರಿ ವೀರಪ್ಪನ್ ಎಂಬಾತ ಗ್ರಾಮಸ್ಥರಿಗೆ ಪ್ರಚೋದನೆ ನೀಡಿರುವ ಅಂಶ ಬಯಲಾಗಿದೆ. ಈ ಪ್ರಕರಣ ದಿನಕ್ಕೊಂಡು ತಿರುವು ಪಡೆಯುತ್ತಿದ್ದು, ಅಂದಿನ ಘಟನೆಯನ್ನು ಖಂಡಿಸಿ ಪ್ರತಿಭಟನೆ, ಅರಣ್ಯ ಕಚೇರಿ ಧ್ವಂಸ, ತದನಂತರದಲ್ಲಿ ಅರಣ್ಯಕ್ಕೆ ಬೆಂಕಿ ಹಚ್ಚಿದ ಬಗ್ಗೆ ಪೊಲೀಸರು ತನಿಖೆ ಕೈಗೊಂಡಾಗ ಈ ಎಲ್ಲಾ ಘಟನೆಗಳ ಹಿಂದೆ ಪ್ರಚೋದನೆ ನೀಡಿರುವುದು ಗೊತ್ತಾಗಿದೆ.

ಇದರ ಹಿಂದಿನ ಜಾಡು ಹಿಡಿದು ಹೊರಟ ಪೊಲೀಸರಿಗೆ ಮರಿ ವೀರಪ್ಪನ್ ಎಂದೇ ಕುಖ್ಯಾತಿ ಹೊಂದಿರುವ ಗಂಗನದೊಡ್ಡಿಯ ಗೋವಿಂದನ ಕೈವಾಡ ಇರುವುದು ಗೊತ್ತಾಗಿದೆ. ಈತ ಹನೂರು ತಾಲ್ಲೂಕಿನ ಪಚ್ಚೆದೊಡ್ಡಿ ಅರಣ್ಯ ಪ್ರದೇಶದಲ್ಲಿ ದೈತ್ಯಾಕಾರದ ಹುಲಿಯನ್ನು ಕೊಂದು ಮೂರು ತುಂಡುಗಳನ್ನಾಗಿ ಮಾಡಿ ಅಮಾನವೀಯತೆ ಮರೆದಿದ್ದನು.ಈ ಪ್ರಕರಣದಲ್ಲಿ ಜೈಲಿಗೆ ಸೇರಿದ್ದ ಈತ ನಂತರದಲ್ಲಿ ಜಾಮೀನು ಪಡೆದು ಹೊರ ಬಂದಿದ್ದಾನೆ.

ಕಾವೇರಿ ವನ್ಯಜೀವಿ ಧಾಮದ ಶಾಗ್ಯ ಕಾಡಿನಲ್ಲಿ ಅರಣ್ಯ ಇಲಾಖೆ ಹಾಗೂ ಕಳ್ಳ ಬೇಟೆಗಾರರ



ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಸಾವನ್ನಪ್ಪಿದ ಬಳಿಕ ನಡೆದ ಗಲಭೆ,ಪ್ರತಿಭಟನೆ ಸೇ–ರಿದಂತೆ ಇನ್ನಿತರ ಘಟನೆಗಳಿಗೆ ಈತ ಪ್ರಚೋದನೆ ನೀಡಿರುವುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ. ಈ ನಡುವೆ ಕಳ್ಳಬೇಟೆ ತಡೆ ಶಿಬಿರ ಹಾಗೂ ವಸತಿ ಗೃಹಗಳ ಮೇಲೆ ದಾಳಿ , ಅರಣ್ಯಕ್ಕೆ ಬೆಂಕಿ ಇಟ್ಟವರು ಯಾರು ಎಂಬ ಬಗ್ಗೆಯೂ ಅರಣ್ಯ ಸಿಬ್ಬಂದಿಯಲ್ಲಿ ಭಯದ ವಾತಾವರಣ ಉಂಟಾಗಿದ್ದು, ಪರಿಸರವಾದಿಗಳ ಆಕ್ರೋಶಕ್ಕೆ ಕಾರಣವಾಗಿದೆ.


ಈ ಘಟನೆಯನ್ನು ಮುಂದಿಟ್ಟುಕೊಂಡು ಸರ್ಕಾರಿ ಆಸ್ತಿ ನಷ್ಟ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂಬ ಒತ್ತಾಯವೂ ಕೇಳಿ ಬಂದಿದೆ.ಪ್ರಕರಣ ಸಂಬಂಧ ರಾಜ್ಯ ಸರ್ಕಾರ ತನಿಖೆಗಾಗಿ ಮ್ಯಾಜಿಸ್ಟ್ರೇಟ್ ನೇತೃತ್ವದ ತಂಡವನ್ನು ರಚಿಸಿದ್ದು, ಈ ತಂಡ ನೀಡುವ ವರದಿ ಆಧಾರದ ಮೇಲೆ ಘಟನೆಗೆ ಮುಖ್ಯ ಕಾರಣವಾದರೂ ಏನು ಎಂಬುವುದು ಗೊತ್ತಾಗಲಿದೆ.

## ಪಾಕ್ ಗ್ಯಾಂಗ್‌ಸ್ಟರ್‌ಗಳೊಂದಿಗೆ ಲಿಂಕ್ : ರಾಜ್ಯದಲ್ಲಿ ಮತ್ತೊಬ್ಬ ಶಂಕಿತ ಉಗ್ರನ ಬಂಧನ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಪಾಕಿಸ್ತಾನಿ ಗ್ಯಾಂಗ್‌ಸ್ಟರ್‌ಗಳ ಜೊತೆ ಸಂಪರ್ಕ ಹೊಂದಿದ ಶಂಕಿತ ಉಗ್ರನೊಬ್ಬನನ್ನು ದೊಡ್ಡಬಳ್ಳಾಪುರ ಟೌನ್ ಪೊಲೀಸರು ಬಂಧಿಸಿದ್ದಾರೆ.ಇಸ್ಲಾಂಪುರದ ನಿವಾಸಿ ಸಯ್ಯದ್ ಅಬೂಬುಕರ್(28) ಬಂಧಿತ ಆರೋಪಿ. ಈತ ಎಸಿ ಮೆಕ್ಯಾನಿಕ್.

ಪಾಕಿಸ್ತಾನದ ಗ್ಯಾಂಗಸ್ಟರ್‌ಗಳ ಜೊತೆ ಇನ್‌ಸ್ಟಾಗ್ರಾಮ್ ಮೂಲಕ ಸಂಪರ್ಕ ದಲ್ಲಿದ್ದು, ತನ್ನ ಆಧಾರ್ ಕಾರ್ಡ್‌ಅನ್ನು ಕೊಟ್ಟು ಅಕೌಂಟ್‌ಗೆ ಲಾಗಿನ್ ಆಗಿ ಕಳೆದ ಎರಡು ವರ್ಷಗಳಿಂದ ಅವರ ಜೊತೆ ಈತ ಸಂವಹನದಲ್ಲಿದ್ದ ಎಂಬುದು ಪೊಲೀಸರ ತನಿಖೆಯಿಂದ ತಿಳಿದುಬಂದಿದೆ. ಈತ ಕೇರಳ, ದೆಹಲಿಗೆ ಹೋಗಿ ತರಬೇತಿ ಕೂಡ ಪಡೆದುಕೊಂಡು ಬಂದಿದ್ದಾನೆ. ಅಲ್ಲದೆ ನಗರದ ಮಸೀದಿಯೊಂದರಲ್ಲಿ ಪಾಠ ಮಾಡುತ್ತಿದ್ದ ಎಂದು ಗೊತ್ತಾಗಿದೆ.



ಕೇಂದ್ರ ಗುಪ್ತದಳ ನೀಡಿದ ಮಾಹಿತಿ ಆಧ–ಾರದ ಮೇಲೆ ದೊಡ್ಡಬಳ್ಳಾಪುರ ಟೌನ್ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ.

ಈಗಾಗಲೇ ಕೇಂದ್ರ ಗುಪ್ತದಳ ಕೊಟ್ಟ ಮಾಹಿತಿಯಂತೆ ತುಮಕೂರು, ದಾವಣಗೆರೆ, ರಾಯಚೂರು, ಕಲಬುರಗಿ ಮುಂತಾದ ಕಡೆ ಸ್ಥಳೀಯ ಪೊಲೀಸರು ಕಾರ್ಯಾಚರಣೆ ನಡೆಸಿ ಪಾಕಿಸ್ತಾನದ ಗ್ಯಾಂಗ್‌ಸ್ಟರ್‌ಗಳ ಜೊತೆ ಸಂಪರ್ಕ ಹೊಂದಿದ್ದ ನಾಲ್ವರನ್ನು ಬಂಧಿಸಿದ್ದಾರೆ.

### ಮಸ್ಕಿ ತಾಲೂಕಿನ ಉಪ್ಪಾರ ಬುದ್ದಿನ್ನಿ ಗ್ರಾಮಕ್ಕೆ ಮೂಲಸೌಲಭ್ಯ ಕಲ್ಪಿಸುವಂತೆ ಶಾಸಕ ಆರ್. ಬಸನಗೌಡ ತುರ್ವಿಹಾಳ್ ಅವರಿಗೆ ಮನವಿ

# ಹಕ್ಕುಪತ್ರ, ಮನೆಗಾಗಿ ಉಪ್ಪಾರ ಬುದ್ದಿನ್ನಿ ಗ್ರಾಮಸ್ಥರ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

ಮಸ್ಕಿ: ತಾಲೂಕಿನ ಉಪ್ಪಾರ ಬುದ್ದಿನ್ನಿ ಗ್ರಾಮದ ಸರ್ವೆ ನಂ.7ರಲ್ಲಿ ವಾಸಿಸುತ್ತಿರುವ ಅರ್ಹ ನಿವೇಶನ ರಹಿತರಿಗೆ ಕೂಡಲೇ ಹಕ್ಕುಪತ್ರ ನೀಡಿ, ಡಾ.ಬಿ.ಆರ್.ಅಂಬೇಡ್ಕರ್ ವಸತಿ ಯೋಜನೆ ಅಥವಾ ರಾಜೀವ್ ಗಾಂಧಿ ವಸತಿ ಯೋಜನೆಯಡಿ ಪಕ್ಕಾ ಮನೆ ನಿರ್ಮಿಸಿಕೊಡಬೇಕು ಎಂದು ಆಗ್ರಹಿಸಿ ಡಾ.ಬಿ.ಆರ್.ಅಂಬೇಡ್ಕರ್ ಯುವಕ ಮಂಡಳಿ ಹಾಗೂ ಗ್ರಾಮಸ್ಥರು ಶಾಸಕ ಆರ್.ಬಸನಗೌಡ ತುರ್ವಿಹಾಳ್ ಅವರಿಗೆ ಮನವಿ ಸಲ್ಲಿಸಿದರು.

ಗ್ರಾಮದಲ್ಲಿ ಸಿಸಿ ರಸ್ತೆ ಕಾಮಗಾ–ರಿಯ ಗುದ್ದಲಿ ಪೂಜೆಗೆ ಆಗಮಿಸಿದ್ದ ಶಾಸಕ–ರಿಗೆ ಮನವಿ ಸಲ್ಲಿಸಿದ ಗ್ರಾಮಸ್ಥರು, ಗ್ರಾಮಸಭೆ ನಡೆದು ಹಲವು ದಿನಗಳು ಕಳೆದರೂ ನಿವೇಶನ



ರಹಿತ ಕುಟುಂಬಗಳ ಸಮಸ್ಯೆಗೆ ಸೂಕ್ತ ಪರಿಹಾರ ದೊರೆತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನಿವೇಶನದ ಜತೆಗೆ ರಸ್ತೆ, ಚರಂಡಿ, ವಿದ್ಯುತ್ ದೀಪ ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಗ್ರಾಮಕ್ಕೆ ಸುಸಜ್ಜಿತ ಸಾರ್ವಜನಿಕ ಬಸ್ ನಿಲ್ದಾಣ ನಿರ್ಮಿಸಬೇಕು ಎಂದು ಒತ್ತಾಯಿಸಿದರು. ಅಲ್ಲದೆ, ಸರ್ವೆ ನಂ.5ರಲ್ಲಿ ಕಾಯ್ದಿರಿಸಿರುವ 5 ಎಕರೆ ಜಮೀನಿನಲ್ಲಿ ಮೊರಾರ್ಜಿ ವಸತಿ ಶಾಲೆಯನ್ನು ಶೀಘ್ರ ನಿರ್ಮಿಸಬೇಕು. ಗ್ರಾಮದ ಸಾಮಾಜಿಕ, ಶೈಕ್ಷಣಿಕ ಹಾಗೂ ವೈಚಾ–ರಿಕ ಅಭಿವೃದ್ಧಿಗಾಗಿ ಬುದ್ಧ ಬಸವ?–ಅಂಬೇಡ್ಕರ್ ಭವನ ನಿರ್ಮಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಶಾಸಕರು ಬಸ್ ನಿಲ್ದಾಣ ಹಾಗೂ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸುವುದಾಗಿ ಭರವಸೆ ನೀಡಿದ್ದಾರೆ. ಹಕ್ಕುಪತ್ರ, ಮನೆ ಹಾಗೂ ವಸತಿ ಶಾಲೆ ಸಂಬಂಧಿತ ಕ್ರಮಕ್ಕೆ ವಿಳಂಬವಾಗಬಹುದು ಎಂದು ತಿಳಿಸಿದ್ದಾರೆ. ಆದರೆ ಗ್ರಾಮಸ್ಥರ ಮೂಲಭೂತ ಅಗತ್ಯಗಳ ವಿಚಾರದಲ್ಲಿ ಅನಗತ್ಯ ವಿಳಂಬ ಮಾಡದೆ, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕಾಲಮಿತಿಯಲ್ಲಿ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಯುವಕ ಮಂಡಳಿ ಒತ್ತಾಯಿಸಿದೆ.

ಈ ಸಂದರ್ಭದಲ್ಲಿ ಯುವಕ ಮಂಡಳಿ ಅಧ್ಯಕ್ಷ ಹುಸೇನಪ್ಪ ರೌಡಲಬಂಡಿ, ದುರುಗಪ್ಪ, ಖಜಾಂಚಿ ಶಿವು ಮಾಜಿ ಮೆಂಬರ್, ಅಮರಪ್ಪ, ಹನುಮಂತ, ಗಂಗಪ್ಪ, ಬಸವರಾಜ್, ಚಿದಾನಂದ್, ಆಕಾಶ್, ಹರ್ಷ, ಎಂ.ಮಲ್ಲೇಶ್ ಸೇರಿದಂತೆ ಪದಾಧಿಕಾ–ರಿಗಳು ಹಾಗೂ ಗ್ರಾಮಸ್ಥರು ಇದ್ದರು.

## ಮಲ್ಲಾಪುರ ಶಾಲೆಯಲ್ಲಿ ಬಿಸಿಯೂಟ ಪ್ರಕರಣ: ವಿದ್ಯಾರ್ಥಿಗಳೊಂದಗೆ ಶಾಸಕಿ ಕರೆಮ್ಮ ಜಿ ನಾಯಕ– ಸಂವಾದ

❑ ನೈಜ್ಯ ದೆಸೆ ನ್ಯೂಸ್

ಅರಕೇರಾ: ಬಿಸಿಯೂಟ ಸೇವಿಸಿ ವಿದ್ಯಾರ್ಥಿಗಳು ಅಸ್ವಸ್ಥಗೊಂಡಿದ್ದ ಪ್ರಕರಣದ ಹಿನ್ನೆಲೆಯಲ್ಲಿ ಶಾಸಕಿ ಕರೆಮ್ಮ ಜಿ ನಾಯಕ ಮಲ್ಲಾಪುರ ಗ್ರಾಮದಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಗೆ ಶನಿವಾರ ಭೇಟಿ ನೀಡಿ ಪರಿಶಿಲನೆ ನಡಿಸಿದರು. ಚಿಕಿತ್ಸೆಪಡೆದು ಗುಣಮುಖರಾದ 81 ಮಕ್ಕಳ ಆರೋಗ್ಯದ ಬಗ್ಗೆ ವಿಚಾರಿಸಿ ದರು. ಸದ್ಯ ಮಕ್ಕಳ ಆರೋಗ್ಯ ಸ್ಥಿತಿ ಸುಧಾರಿಸಿದ್ದು ಆತಂಕ ಪಡುವ ಅಗತ್ಯವಿಲ್ಲ.

ಆಹಾರ ಮಾದರಿ ಹಾಗೂ ನೀರನ್ನು ಪರೀಕ್ಷೆಗೆ ಕಳುಹಿಸಿರುವುದಾಗಿ ವೈದ್ಯರು ಹಾಗೂ ಶಿಕ್ಷಕರು ಮಾಹಿತಿ ನೀಡಿದರು. ವಿದ್ಯಾರ್ಥಿಗಳಾದ ಪಲ್ಲವಿ, ನಂದಿನಿ, ಸಂದೀಪ್, ರೇಣುಕಾದೇವಿ ಸೇರಿದಂತೆ ಇರ ವಿದ್ಯಾರ್ಥಿಗಳೊಂದಿಗೆ ಶಾಸಕಿ ನೇರವಾಗಿ ಸಂವಾದ ನಡೆಸಿದರು. ಬಿಸಿಯೂಟದ ರುಚಿ ಮತ್ತು



ಗುಣಮಟ್ಟ ಹೇಗಿತ್ತು, ಪ್ರತಿದಿನ ಏನೆಲ್ಲಾ ಆಹಾರ ನೀಡಲಾಗುತ್ತದೆ, ಶಿಕ್ಷಣ ಹೇಗೆ ನಡೆಯುತ್ತಿದೆ ಎಂಬುದರ ಬಗ್ಗೆ ಪ್ರಶ್ನೆಗಳನ್ನು ಕೇಳಿ ಮಕ್ಕಳಿಂದಲೇ ಮಾಹಿತಿ ಸಂಗ್ರಹಿಸಿದರು. ಮಕ್ಕಳು ನೀಡಿದ ಮಾಹಿತಿಯನ್ನು ಗಂಭಿರವಾಗಿ ಆಲಿಸಿದರು.

ಮಕ್ಕಳ ಆರೋಗ್ಯದ ವಿಷಯದಲ್ಲಿ ಯಾವುದೇ ನಿರ್ಲಕ್ಷ್ಯ ಸಲ್ಲದು. ಬಿಸಿಯೂಟದ ಗುಣಮಟ್ಟವನ್ನು ಪ್ರತಿದಿನ ಕಡ್ಡಾಯವಾಗಿ ಪರಿಶೀಲಿಸಬೇಕು, ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು. ಶಾಲೆಯ ಕೊಠಡಿಗಳ ಸ್ಥಿತಿ–ಗಿತಿ, ಶೌಚಾಲಯಗಳ ಸ್ವಚ್ಛತೆ, ಕುಡಿಯುವ ನೀರಿನ

> ಮಲ್ಲಾಪುರ ಗ್ರಾಮಕ್ಕೆ ಬಹುದಿನದ ಬೇಡಿಕೆಯಾಗಿದ್ದ ಪ್ರೌಢಶಾಲೆ ಮಂಜೂರಾಗಿದೆ.
> ಇಲ್ಲಿನ ಮಕ್ಕಳು ಪ್ರೌಢ ಶಿಕ್ಷಣಕ್ಕಾಗಿ ದೂರದ ಊರುಗಳಿಗೆ ಹೋಗಬೇಕಾಗಿತ್ತು. ಇದರಿಂದ ಬಡ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗುತ್ತಿತ್ತು. ಮಕ್ಕಳ ಶಿಕ್ಷಣದ ಗುಣಮಟ್ಟದ ಬಗ್ಗೆ ಕಾಳಜಿ ವಹಿಸಿ ಸರ್ಕಾರ ಶಾಲೆಯನ್ನು ಮಂಜೂರು ಮಾಡಿದೆ. ಸುಮಾರು 2 ಕೋಟಿ 10ಲಕ್ಷ ರೂ. ವೆಚ್ಚದಲ್ಲಿ ಸುಸಜ್ಜಿತ ಕಟ್ಟಡ, ಪ್ರಯೋಗಾಲಯ, ಗ್ರಂಥಾಲಯ, ಆಟದ ಮೈದಾನ ಸೇರಿದಂತೆ ಎಲ್ಲಾ ಮೂಲ ಸೌಕರ್ಯಗಳೊಂದಿಗೆ ಶಾಲೆ ನಿರ್ಮಾಣ ಮಾಡಲಾಗುವುದು. ಶೀಘ್ರದಲ್ಲೇ ಅಡಿಗಲ್ಲು ಹಾಕಲಾಗುವುದು – ಶಾಸಕಿ ಕರೆಮ್ಮ ಜಿ ನಾಯಕ

ವ್ಯವಸ್ಥೆ, ಆಟದ ಮೈದಾನದ ನಿರ್ವಹಣೆ ಸೇ–ರಿದಂತೆ ಹಲವು ವಿಷಯಗಳ ಕುರಿತು ಎಸ್ಡಿಎಂಸಿ ಸಮಿತಿ ಹಾಗೂ ಗ್ರಾಮಸ್ಥರೊಂದಿಗೆ ಚರ್ಚಿಸಿದರು. ಅಗತ್ಯ ಸೌಕರ್ಯಗಳ ಕೊರತೆಗಳನ್ನು ಶೀಘ್ರದಲ್ಲೇ ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು. ಸಂದರ್ಭದಲ್ಲಿ ತಹಶೀಲ್ದಾರ ಅಮರೇಶ ಬೀರಾದಾರ, ಇಓ ಯಮನಪ್ಪ ವಾಲೀಕಿ, ಸಮನ್ವಯ ಅಧಿಕಾರಿ ಶಿವರಾಜ ಪೂಜಾರಿ, ಅಕ್ಷರದಾಸೋಹ ಸಹಾಯಕ ನಿರ್ದೇಶಕರಾದ ಬಸವರಾಜಕಟ್ಟಿಮನಿ, ಐಪಿ–ಎಸ್ ವೈಶಾಲಿ ಝಳಕಿ, ಜಿಪಂ ಅಭಿಯಂತರ ಈರರಾಲ್, ಬಸನಗೌಡ ದೇಸಾಯಿ, ಸಿದ್ದಣ್ಣ ಡೊಂಡಬಳಿ, ವೆಂಕನಗೌಡ ನಾಯಕ , ತಾಲೂಕು ಮಟ್ಟದ ಅಧಿಕಾರಿಗಳು, ಶಾಲೆಯ ಮುಖ್ಯ ಶಿಕ್ಷಕರು, ಸಿಬ್ಬಂದಿ ವರ್ಗ, ಪೋಷಕರು ಗ್ರಾಮಸ್ಥರು ಇದ್ದರು.

ಚಿತ್ರಸುದಿ ಸಂಖ್ಯೆ 22(2) ಶಾಸಕಿ ಕರೆಮ್ಮ ಜಿ ನಾಯಕ ಮಲ್ಲಾಪುರ ಗ್ರಾಮದಲ್ಲಿನ ಸರ್ಕಾರಿ ಪ್ರಾಥ–ಮಿಕ ಶಾಲೆಗೆ ಶನಿವಾರ ಭೇಟಿ ನೀಡಿ ಪರಿಶಿಲನೆ ನಡಿಸಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101